www.divinegen.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 7 ಸಂಚಿಕೆ -5 ಎಪ್ರಿಲ್ 2012
Volume : VII Issue : V April 2012

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Devine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ಪ್ರಶ್ನೋತ್ತರಗಳ ಸ್ವರ
3. ವಯಸ್ಕರ ಸ್ವರ
4. ತಿಳುವಳಿಕೆಯ ಸ್ವರ – ನಾವು ಯಾಕೆ ನೀರಿನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು?
5. ಆರೋಗ್ಯಸ್ವರ
6. ಪುನರ್‌ಸ್ಥಾಪನೆ
7. ಪ್ರಾರ್ಥನಾ ಮನವಿ
8. ಪ್ರೇಮವೋ? ಕಾಮವೋ? ಮೋಹವೋ?
9. ಅನಾಥರ ಸ್ವರ
10. ಆಳವಾದ ಸ್ಥಳಕ್ಕೆ
11. ಕ್ರಿಸ್ತನ ವಿಷಯ ನೀವೇನು ಅನ್ನುತ್ತೀರಿ?
12. ನಮ್ಮ ಪ್ರಶ್ನೆ ನಿಮ್ಮ ಉತ್ತರ
13. ಪ್ರಾರ್ಥನಾ ಸ್ವರ
14. ಸ್ಥಳೀಯ ಮತ್ತು ವಿದೇಶ ಸುದ್ಧಿ
15. ಮಕ್ಕಳ ಸ್ವರ
16. ಬೈಬಲ್ ಕ್ವಿಜ್
17. ಕಣ್ಣೀರನ್ನು ನೋಡಿದ ದೇವರು
18. ನಿಮಗಾಗಿ ಚಿಂತಿಸುವ ದೇವರು

## ಸಂಪಾದಕರ ಲೇಖನಿಯಿಂದ . . .



ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ಪ್ರಿಯ ವಾಚಕರೆಲ್ಲರಿಗೂ ಹಾಗೂ ಕ್ರಿಸ್ತನಲ್ಲಿ ನನ್ನ ಪ್ರೀತಿಯ ಸಹೋದರ ಸಹೋದರಿಯರೆಲ್ಲರಿಗೂ ನನ್ನ ರಕ್ಷಕನು ವಿಮೋಚಕನು ಮತ್ತು ಅತೀ ಬೇಗನೆ ಬಂದು ಕರೆದುಕೊಂಡು ಹೋಗುವ ಯೇಸುವಿನ ನಾಮದಲ್ಲಿ ನನ್ನ ಆತ್ಮೀಯ ವಂದನೆಗಳು. ಪ್ರಿಯರೇ, ನಾವು ಲೋಕವನ್ನು ಒಂದು ಸಾರಿ ನೋಡುವುದಾದರೆ ಎಲ್ಲಿ ನೋಡಿದರು ದ್ವೇಷ, ಕಲಹ, ಜಗಳ, ರಾಜಕ್ಕೆ ವಿರೋಧವಾಗಿ ರಾಜ್ಯ, ಅಧಿಕಾರಕ್ಕೆ ವಿರೋಧವಾಗಿ ಅಧಿಕಾರಿಗಳು , ಮೋಸದಿಂದ ಕೂಡಿದ ಜಗತ್ತನ್ನು ನಾವು ನೋಡುತ್ತಿದ್ದೇವೆ. ಆದರೆ ಇದೆಲ್ಲವೂ ಕರ್ತನ ಬರೋಣ ಅತೀ ಸಮೀಪವಾಗಿದೆ ಎಂದು ಸೂಚಿಸುವಂಥಹದಾಗಿದೆ. (ಮತ್ತಾಯ 23:11–14). ಆದರೆ ನಮ್ಮ ಮೇಲೆ ಕರ್ತನು ಒಂದು ಭಾರವನ್ನು ಹಾಕಿದ್ದಾನೆ ಏನೆಂದರೆ ನೀವು ಹೊರಟು ಹೋಗಿ ಲೋಕದ ಕಟ್ಟಕಡೆಯವರೆಗೂ ಸುವಾರ್ತೆಯನ್ನು ಸಾರಬೇಕೆಂಬುದೆ. ನಾವು ಇನ್ನು ಸಹ ನಿದ್ರೆಯನ್ನು ಮಾಡುತ್ತಾ ಕಾಲವನ್ನು ಸುಮ್ಮನೆ ಕಳೆದುಕೊಳ್ಳುತ್ತಾ ಇರುವುದಾದರೆ ಕರ್ತನು ಇಂದು ಒಂದು ಎಚ್ಚರಿಕೆಯನ್ನು ಕೊಡುತ್ತಿದ್ದಾನೆ. **"ನಿದ್ರೆ ಮಾಡುವವನೇ, ಎಚ್ಚರವಾಗು; ಸತ್ತವರನ್ನು ಬಿಟ್ಟು ಏಳು! ಕ್ರಿಸ್ತನು ನಿನಗೆ ಪ್ರಕಾಶ ಕೊಡುವನು ಆದಕಾರಣ ನೀವು ನಡಕೊಳ್ಳುವ ರೀತಿಯನ್ನು ಕುರಿತು ಚೆನ್ನಾಗಿ ನೋಡಿಕೊಳ್ಳಿರಿ. ಜ್ಞಾನವಿಲ್ಲದವರಾಗಿರದೆ ಜ್ಞಾನವಂತರಾಗಿರ್ರಿ"** (ಎಫೆ. 5:14–15). **"ಸಮಯವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿ ಹೊರಗಿನವರ ಮುಂದೆ ಜ್ಞಾನವುಳ್ಳವರಾಗಿ ನಡೆದುಕೊಳ್ಳಿರಿ"** (ಕೊಲೊ. 4:5).

**"ಸೋಮಾರಿಯೇ, ಇರುವೆಯ ಹತ್ತಿರ ಹೋಗಿ ಅದರ ನಡವಳಿಕೆಯನ್ನು ನೋಡಿ ಜ್ಞಾನವನ್ನು ತಂದುಕೋ. ಅದಕ್ಕೆ ನಾಯಕ ಅಧಿಕಾರಿ ಪ್ರಭುಗಳಿಲ್ಲದಿದ್ದರೂ ಸುಗ್ಗಿಯಲ್ಲಿ ತನ್ನ ತೀನಿಯನ್ನು ಕೂಡಿಸಿಡುವದು, ಕೊಯ್ಲಿನ ಕಾಲದಲ್ಲಿ ತನಗೆ ಬೇಕಾದಷ್ಟು ಆಹಾರವನ್ನು ಸಂಗ್ರಹಿಟ್ಟುಕೊಳ್ಳುವದು"** (ಜ್ಞಾನೋ. 6:6–8). ಪ್ರಿಯರೇ ಇನ್ನು ಸಹ ನಾವು ಪೌಳಿಯ ಒಡಕಿನಲ್ಲಿ ನಿಲ್ಲದೆ ಹೋದರೆ ಮತ್ತ್ಯಾರು ನಿಲ್ಲಲು ಸಾಧ್ಯ. ಅ ಕಲ್ವಾರಿ ಕ್ರೂಜೆಯಲ್ಲಿ ನನಗಾಗಿ ಮತ್ತು ನಿನಗಾಗಿ ತೋರಿಸಿದ ಆ ಪ್ರೀತಿಯನ್ನು ನೆನೆಸಿ ಮುಂದೆ ಬಂದು ದೇವರ ಸೇವೆಯನ್ನು ಮಾಡು. ಸುವಾರ್ತೆ ಸಾರದ ಊರು ಕ್ರಿಸ್ತನನ್ನು ತಿಳಿಯದ ಜನರು ಇರಬಾರದು ಎಂದು ಕರ್ತನು ಹೇಳುತ್ತಿದ್ದಾನೆ ಆದುದರಿಂದ ನಿತ್ಯಜೀವಕ್ಕಾಗಿ ಪ್ರಯಾಸಪಟ್ಟು ಮುಂದೆ ಓಡೋಣ. **"ದುಷ್ಟನ ಸಾವಿನಲ್ಲಿ ನನಗೆ ಲೇಶವಾದರೂ ಸಂತೋಷವುಂಟೋ? ಅವನು ತನ್ನ ದುರ್ಮಾರ್ಗವನ್ನು ಬಿಟ್ಟು ಬಾಳುವದೇ ನನಗೆ ಸಂತೋಷ"** (ಯೆಹೆ. 18:23).

ಕರ್ತನು ನಿಮ್ಮನ್ನು ಚೀಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ.

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

1) ಪಾತಾಳದ ಮೊದಲನೇ ಭಾಗದಲ್ಲಿ ಹಳೆ ಒಡಂಬಡಿಕೆಯ ಸತ್ತಂತಹ ಭಕ್ತರ ಆತ್ಮಗಳು ವಿಶ್ರಮಿಸುತ್ತಿದ್ದವು ಎಂದು ತಿಳಿದುಕೊಂಡೆವು. ಇದುವೇ 4ನೇ ಪರದೈಸಾಗಿದೆ. ಆದಿ. 37:35, ಲೂಕ. 16:19–31 ರಲ್ಲಿ ಅಬ್ರಹಾಮ ಲಾಜರ ಇದ್ದಂತಹ ಸ್ಥಳ.

2) ಪಾತಾಳದ 2ನೇ ಭಾಗದಲ್ಲಿ ಗ್ರೀಕ್‌ನಲ್ಲಿ Tartaroo (ಟಾಟ್‌ರೂ) ಎಂಬುದಾಗಿ ಹೇಳುವ ಸ್ಥಳವಿತ್ತು ಇದಕ್ಕೆ ಕನ್ನಡ ಭಾಷಾಂತರ ಕತ್ತಲೆಯ ಗುಂಡಿಗಳು ಎಂಬುದಾಗಿ ಯೂದ. 1:6, 2 ಪೇತ್ರ. 2:4 ಬಿದ್ದು ಹೋದಂತಹ ಆತ್ಮಗಳನ್ನು ಬಂಧಿಸಿರುವ ಸ್ಥಳವೇ ಇದಾಗಿದೆ. ಲೂಕ. 16:19–31 ರಲ್ಲಿ ಐಶ್ವರ್ಯವಂತನು ಲಾಜರನ್ನು ಕಳುಹಿಸು ಎಂದು ಅಬ್ರಹಾಮನನ್ನು ಬೇಡಿಕೊಂಡಾಗ ಅಬ್ರಹಾಮನು ನಿಮ್ಮ ಮತ್ತು ನಮ್ಮ ಮಧ್ಯದಲ್ಲಿ ದೊಡ್ಡ ಡೊಂಗರವಿದೆ ಎಂದು ಹೇಳಿದ ಸ್ಥಳವೇ ಇದಾಗಿದೆ.

3) ಪಾತಾಳದ 3ನೇ ಭಾಗದಲ್ಲಿ ಗ್ರೀಕನಲ್ಲಿ Tormene place ಕನ್ನಡದಲ್ಲಿ ಉಪದ್ರವದ ಸ್ಥಳ, ಬೆಂಕಿಯಿಂದ ಉರಿಯುವ ಸ್ಥಳ ಹುಳಗಳು ಸತತವಾಗಿ ಕಡಿದು ಮಿಡಿಸುವ ಸ್ಥಳ ಇದು ಒಬ್ಬ ಅವಿಶ್ವಾಸಿ (ಯೇಸುಕ್ರಿಸ್ತನನ್ನು ಸ್ವಂತ ರಕ್ಷಕನಾಗಿ ಅಂಗೀಕರಿಸದೆ ರಕ್ಷಣೆ ಹೊಂದದೆ ಸತ್ತವನು) ಶರೀರ ಬಿಟ್ಟ ಕೂಡಲೇ ಹೋಗುವಂಥ ಸ್ಥಳವೇ ಇದಾಗಿದೆ. ಲೂಕ. 16:19–31 ರಲ್ಲಿ ಐಶ್ವರ್ಯವಂತನು ಶರೀರ ಬಿಟ್ಟ ಕೂಡಲೇ ಇದೇ ಸ್ಥಳಕ್ಕೆ ಹೋದನು. ಕೊನೆಯ ನ್ಯಾಯತೀರ್ಪಾದ ಬಿಳಿ ಸಿಂಹಾಸನದ ನ್ಯಾಯತೀರ್ಪಿನ ವರೆಗೆ ಈ ಸ್ಥಳದಲ್ಲಿರುವಂಥ ಆತ್ಮಗಳು ಉಪದ್ರವಿಸಲ್ಪಡುತ್ತಾರೆ. ಬಿಳಿ ಸಿಂಹಾಸನದ ನ್ಯಾಯತೀರ್ಪಾದ ಕೂಡಲೆ ಅಲ್ಲಿಂದ ನಿಜವಾದ ನರಕಕ್ಕೆ ದೊಬ್ಬಲ್ಪಡುತ್ತಾರೆ (ಪ್ರಕ. 20:11–15).

4) ಪಾತಾಳದ 4ನೇ ಭಾಗವು ಬೆಂಕಿ ಗಂಧಕಗಳಿಂದ ಉರಿಯುವ ಕೆರೆ ಇದೇ ನಿಜವಾದ ನರಕವಾಗಿದೆ. ಇದಕ್ಕೆ ಗ್ರೀಕ್‌ನ ಪದ ಲಿಮ್ನೆನೌಟ್ ಪುರೋಸ್ (limnentov puros) ಪ್ರಕ. 20:15, 21:8 ಇಲ್ಲಿಯವರೆಗೆ ಯಾರನ್ನು ನಿಜವಾದ ನರಕವೆಂಬ ಬೆಂಕಿಯ ಕೆರೆಯಲ್ಲಿ ಹಾಕಲಿಲ್ಲ ಅದು ಕೇವಲ ಸಿದ್ಧಮಾಡಲ್ಪಟ್ಟಿದೆ ಮಾತ್ರ. ಮತ್ತಾ. 25:41 ಆ ಮೇಲೆ ಆತನು ಎಡಗಡೆಯಲ್ಲಿರುವವರಿಗೆ ಶಾಪಗ್ರಸ್ಥರೇ ನನ್ನನ್ನು ಬಿಟ್ಟು ಪಿಶಾಚನಿಗೂ ಆತನ ದೂತರಿಗೂ ಸಿದ್ಧ ಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ. ನರಕವು ಮನುಷ್ಯನಿಗಾಗಿ ಸಿದ್ಧ ಮಾಡಲ್ಪಟ್ಟಿದ್ದಲ್ಲ ಆದರೆ ಮನುಷ್ಯನು ಕರ್ತನಾದ ಯೇಸುಕ್ರಿಸ್ತನ ಮೂಲಕವಾಗಿ ಬಂದ ರಕ್ಷಣೆಯನ್ನು ತಿರಸ್ಕರಿಸಿ ನಿತ್ಯ ನರಕಕ್ಕೆ ಹೋಗಲು ಸ್ವತಃ ಆರಿಸಿಕೊಂಡನು.

**ನರಕದ ಸತ್ಯ :**

1. ನರಕವು ನಿತ್ಯ ನಾಶನದ ಸ್ಥಳವಾಗಿದೆ (2 ಥೆಸ. 1:10).
2. ನರಕವು ನಿತ್ಯ ಶಿಕ್ಷೆಯ ಸ್ಥಳವಾಗಿದೆ (ಮತ್ತಾ. 25:46).
3. ನರಕವು ನಿತ್ಯ ಬೆಂಕಿಯ ಸ್ಥಳವಾಗಿದೆ (ಮತ್ತಾ. 25:41).
4. ಆರದ ಬೆಂಕಿಯ ಸ್ಥಳವಾಗಿದೆ ನರಕ (ಮಾರ್ಕ. 9:43).
5. ನರಕದಲ್ಲಿ ಕಡಿಯುವ ಹುಳ ಸಾಯುವುದಿಲ್ಲ (ಮಾರ್ಕ. 9:48).
6. ಬೆಂಕಿ ಮತ್ತು ಗಂಧಕ ಇರುವ ಸ್ಥಳವಾಗಿದೆ (ಪ್ರಕ. 14:10).
7. ನರಕವು ನಿತ್ಯ ಯಾತನೆಯ ಸ್ಥಳವಾಗಿದೆ (ಪ್ರಕ. 14:11).
8. ನರಕವು ಹಗಲಿರುಳು ಉಪಶಮನವಿಲ್ಲದ ಸ್ಥಳವಾಗಿದೆ (ಪ್ರಕ. 14:11).
9. ಹಗಲಿರುಳು ಯುಗಾಯುಗಾಂತರಗಳಲ್ಲಿಯೂ ಯಾತನೆಪಡುವ ಸ್ಥಳ ನರಕ (ಪ್ರಕ. 20:10).
10. ನರಕವು ಎರಡನೇ ಮರಣವಾಗಿದೆ (ಪ್ರಕ. 20:14, 21:8).

ನನ್ನ ದೃಷ್ಟಿ ಯಾವಾಗಲೂ ಯೆಹೋವನಲ್ಲಿದೆ; ಆತನೇ ನನ್ನ ಕಾಲುಗಳನ್ನು ಬಲೆಯಿಂದ ಬಿಡಿಸುವವನು (ಕೀರ್ತ.25:15).

5) ಭೂಮಿಯ ಕೆಳಗಿರುವ ಪಾತಾಳದಲ್ಲಿರುವ 5ನೇ ಭಾಗವೇ ಅಧೋಲೋಕ (BOTEM LESS PIT) ಪ್ರಕ. 9:1 ತಳವಿಲ್ಲದ ಸೆರೆಮನೆ. ಇದರಲ್ಲಿ ಸೈತಾನನು ಸಾವಿರ ವರುಷ ಬಂಧಿಸಲ್ಪಡಲಿಕ್ಕೆ ಇದ್ದಾನೆ (ಪ್ರಕ. 20:1).

6) 5ನೇ ಪರದೈಸು ಎಫೆ. 4:6–8 ಇದು ಹೊಸ ಒಡಂಬಡಿಕೆಯ ಸತ್ತಂತಹ ವಿಶ್ವಾಸಿಗಳ ಆತ್ಮಗಳಿರುವಂತಹ ಸ್ಥಳವಾಗಿದೆ. ಕರ್ತನಾದ ಯೇಸುಕ್ರಿಸ್ತನು ಸತ್ತು ಹೂಣಲ್ಪಟ್ಟು ಮೂರು ದಿನದ ನಂತರದಲ್ಲಿ ಎದ್ದು ಬಂದ ಮೇಲೆ 1) ಆತನು ಮಾಡಿದ ಮೊದಲನೆಯ ಕಾರ್ಯ ಪರಲೋಕದ ದೇವದರ್ಶನದ ಗುಡಾರದೊಳಗೆ ಪ್ರವೇಶಿಸಿ ತನ್ನ ರಕ್ತವನ್ನು ಅರ್ಪಿಸಿದನು (ಇಬ್ರಿ. 9:12, ಯೋಹಾ. 20:17).

2) ಹಳೆ ಒಡಂಬಡಿಕೆಯಲ್ಲಿ ದೇವ ಭಕ್ತರಾಗಿ ಸತ್ತಂತಹ ಆತ್ಮಗಳು ವಿಶ್ರಮಿಸುವ ಭೂಮಿಯ ಕೆಳಗಿನ ಮೊದಲ ಭಾಗದಲ್ಲಿದ್ದ ಆತ್ಮಗಳನ್ನು ಪರಲೋಕದ ಪರದೈಸಿಗೆ ವರ್ಗಾಯಿಸಿದನು (ಎಫೆ. 4:6–8).

ಈಗ ಕ್ರೈಸ್ತ ವಿಶ್ವಾಸಿಗಳಾಗಿ ಸಾಯುವಂತಹ ಪ್ರತಿಯೊಂದು ಭಕ್ತರ ಆತ್ಮವು ನೇರವಾಗಿ ಪರಲೋಕದಲ್ಲಿರುವ ವಿಶ್ರಾಂತಿ ಸ್ಥಳಕ್ಕೆ ಹೋಗುತ್ತದೆ ಹಾಗೂ ಯೇಸುಕ್ರಿಸ್ತನ ರಹಸ್ಯ ಬರೋಣದಲ್ಲಿ ರೂಪಾಂತರ ಶರೀರದೊಂದಿಗೆ ಎತ್ತಲ್ಪಡುವಂತದ್ದಾಗಿದೆ (1 ಥೆಸ. 4:13–18). ಈ ಸ್ಥಳದ ಅವಧಿ ಕೇವಲ ಯೇಸುಕ್ರಿಸ್ತನ ರಹಸ್ಯ ಬರೋಣದವರೆಗೆ ಮಾತ್ರ.

7) 6ನೆಯ ಪರದೈಸು ಕ್ರಿಸ್ತನೊಂದಿಗೆ ಸಾವಿರ ವರ್ಷಗಳ ಆಳ್ವಿಕೆಯಾಗಿದೆ. ಅದರ ಬಗ್ಗೆ ಪ್ರಕ. 20:1–6 ಭಾಗ ಬರುವಾಗ ಸಂಕ್ಷಿಪ್ತವಾಗಿ ಧ್ಯಾನಿಸೋಣ.

8) 7ನೆಯ ಪರದೈಸು ಹೊಸ ಭೂಮಿ, ಹೊಸ ಆಕಾಶ ಪ್ರಕ. 21ನೆ ಅಧ್ಯಾಯ ಇದನ್ನು ಪ್ರಕಟಣೆ ಪುಸ್ತಕದ 21ನೇ ಅಧ್ಯಾಯದಲ್ಲಿ ಸವಿವರವಾಗಿ ಧ್ಯಾನಿಸೋಣ (ಯೆಶಾ. 65:17, 66:22). ಈಗ ಪ್ರಕಟಣೆ ಪುಸ್ತಕದ 5ನೇ ಧನ್ಯರ ಪಟ್ಟಿಯಾದ ಪ್ರಕ. 20:6 ರಲ್ಲಿ ನಾವು ಧ್ಯಾನ ಮಾಡುತ್ತಾ ಇದ್ದೇವೆ. ಪ್ರಥಮ ಪುನರುತ್ಥಾನದಲ್ಲಿ ಸೇರಿರುವವನು ಧನ್ಯನು ಎಂಬುದಾಗಿ.

ಮುಂದುವರಿಯುವದು....

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

---

ಯೆಹೋವನು ತನ್ನ ಜನರಿಗೆ ಬಲವೂ ತಾನು ಅಭಿಷೇಕಿಸಿದವನಿಗೆ ಆಶ್ರಯದುರ್ಗವೂ ಆಗಿದ್ದಾನೆ (ಕೀರ್ತ. 28:8).

# ದೇವರೊಂದಿಗೆ ನಡೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**"ಯಾವಾಗಲೂ ಕರ್ತನಲ್ಲಿ ಸಂತೋಷಿಸಿರಿ, ಸಂತೋಷಪಡಿರಿ ಎಂದು ತಿರುಗಿ ಹೇಳುತ್ತೇನೆ"** (ಫಿಲಿ. 4:4). ಮೇಲಿನ ವಾಕ್ಯದಲ್ಲಿ ಪೌಲನು ಬರೆಯುತ್ತಾನೆ, ಯಾವಾಗಲೂ ಕರ್ತನಲ್ಲಿ ಸಂತೋಷಪಡಬೇಕೆಂದು ಹೇಳುತ್ತಾನೆ. ಸಾಮಾನ್ಯವಾಗಿ ನಾವು ಹೇಳಬಹುದು. ಸಂತೋಷವಿದ್ದಾಗ, ಕರ್ತನು ನಮ್ಮನ್ನು ಆಶೀರ್ವಾದಿಸಿದ ಸಮಯಗಳಲ್ಲಿ ನಾವು ಸಾಮಾನ್ಯವಾಗಿ ಕರ್ತನಲ್ಲಿ ಸಂತೋಷಿಸಬಹುದು. ಆದರೆ ಶೋಧನೆ, ವೇದನೆಗಳಲ್ಲಿ ನಾವು ಹೇಗೆ ಕರ್ತನಲ್ಲಿ ಸಂತೋಷಪಡಲು ಸಾಧ್ಯ? ನಾವು ಪ್ರಶ್ನಿಸಬಹುದು. ಆದರೆ ಪ್ರಿಯನೇ, ವೇದನೆ ಶೋಧನೆಗಳಲ್ಲಿ ನಾವು ಹಾದು ಹೋಗುವಾಗಲೂ ಸದಾ ನಮ್ಮೊಳಗೆ ಸಂತೋಷ, ಸಮಾಧಾನವನ್ನು ಉಂಟು ಮಾಡುವುದು ಪವಿತ್ರಾತ್ಮನೇ ಆಗಿದ್ದಾನೆ. ಕೀರ್ತನೆಗಾರನು ಬರೆಯುತ್ತಾನೆ, ಸಂಜೆಗೆ ದು:ಖವೆಂಬುವುದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರು ಮುಂಜಾನೆ ಹರ್ಷಧ್ವನಿಯು ಕೇಳಿಸುವುದು (ಕೀರ್ತ. 30:5). ದೇವರು ಯಾವಾಗಲೂ ಆತನಲ್ಲಿ ಆನಂದಿಸುವಂತೆ ನಮ್ಮನ್ನು ಚೈತನ್ಯ ಪಡಿಸುವವನಾಗಿರುತ್ತಾನೆ. ದೇವರ ವಾಕ್ಯ ತಿಳಿಸುತ್ತದೆ "ನಿಜವಾದ ಸುನ್ನತಿಯವರು ಯಾರಂದರೆ ದೇವರಾತ್ಮನಿಂದ ಪ್ರೇರಿತರಾಗಿ ಆರಾಧಿಸುವರು, ಕ್ರಿಸ್ತ ಯೇಸುವಿನಲ್ಲಿ ಹರ್ಷಗೊಳ್ಳುವವರು, ಶರೀರ ಸಂಬಂಧವಾದುವುಗಳಲ್ಲಿ ಭರವಸೆವಿಲ್ಲದವರೂ ಆಗಿರುವ ನಾವೇ? (ಫಿಲಿ. 3:3) ಇಂದು ನಾವು ಆತ್ಮೀಕ ಸಭೆಗಳಲ್ಲಿ ಹಲವೆಡೆ ಕಾಣಬಹುದಾದ ಸಂಗತಿಗಳಾವುದನೇಂದರೆ ರಕ್ಷಣೆ ಹೊಂದಿದ ಆರಂಭದ ದಿನಗಳಲ್ಲಿ, ವಿಶ್ವಾಸಿಗಳಲ್ಲಿ ಬಹಳಷ್ಟು ಮಂದಿ ನಿಜವಾದ ಆನಂದದಿಂದ ಸೇವಿಸುತ್ತಾ, ವೈರಾಗ್ಯವುಳ್ಳವರಾಗಿರುತ್ತಾರೆ. ಆದರೆ ಕಾಲ ಕ್ರಮೇಣ ಕಾರಣಾಂತರದಿಂದ ಆ ಆತ್ಮೀಕ ಸಂತೋಷವನ್ನು ಕಳಕೊಂಡು ಯಾಂತ್ರಿಕವಾಗಿ ಕರ್ತನನ್ನು ಆರಾಧಿಸುವ ರೀತಿಯಲ್ಲಿರುತ್ತಾರೆ. ಯೋಬನು ಹೇಳುವ ರೀತಿಯಲ್ಲಿ ಹೇಳುವವರಾಗಿರುತ್ತಾರೆ. **"ಆ ದಿನಗಳು ನನ್ನ ಜೀವಮಾನದ ಸುಗ್ಗೀ ಕಾಲವು, ದೇವರ ಸ್ನೇಹವು ನನ್ನ ಗುಡಾರವನ್ನು ಆವರಿಸಿಕೊಂಡಿತ್ತು. ಸರ್ವಶಕ್ತನು ಇನ್ನೂ ನನ್ನೊಂದಿಗಿದ್ದನು"** (ಯೋಬ. 29:4).

ಆ ದಿನಗಳು (ಆರಂಭದ) ಮಾತ್ರವೋ ಈ ದಿನಗಳು ಕೂಡಾ ನೀನು ಕರ್ತನಲ್ಲಿ ಸಂತೋಷಿಸಬೇಕಾಗಿದೆ ಪ್ರಿಯನೇ, ನಾವು ಕರ್ತನಲ್ಲಿ ಪರಿಪೂರ್ಣವಾಗಿ ಆನಂದಿಸಲಾಗದಂತೆ ತಡೆಯುವ ಅನೇಕ ಸಂಗತಿಗಳಿವೆ. ಅದನ್ನು ನಾವು ಮುಂದಿನ ಸಂಚಿಕೆಗಳಲ್ಲಿ ಧ್ಯಾನಿಸುವಾ? ಭಕ್ತನಾದ ದಾವೀದನು ಬರೆಯುತ್ತಾನೆ, **"ನಿನ್ನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ"** (ಕೀರ್ತ. 16:11).

**ಪೌಲನು ಬರೆಯುತ್ತಾನೆ, ತಿನ್ನುವುದು ಕುಡಿಯುವುದು ದೇವರ ರಾಜ್ಯವಲ್ಲ ನೀತಿಯು, ಸಮಾಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ ಆಗಿದೆ** (ರೋಮ. 14:17). ಸಾಮಾನ್ಯವಾಗಿ ನಾವು ಪರಿಸ್ಥಿತಿ ಹೇಗಿದೆಯೋ ಹಾಗೆಯೇ ನಾವು ದೇವರನ್ನು ಆರಾಧಿಸುತ್ತೇವೆ. ಸಂತೋಷವಿದ್ದಾಗ ಕೈತಟ್ಟುತ್ತೇವೆ. ಸಂತೋಷವಿಲ್ಲದಿದ್ದರೆ ಕೈ ಕಟ್ಟುತ್ತೇವೆ.

**ಪುರಸ್ಕಾರ ಸ್ವರ**

ಯೇಸುವಿನ ತಾಯಿಯಾದ ಮರಿಯಳು ಹೇಳುತ್ತಾಳೆ, **"ನನ್ನ ಆತ್ಮವು ರಕ್ಷಕನಾದ ದೇವರ ವಿಷಯದಲ್ಲಿ ಉಲ್ಲಾಸಗೊಂಡದೆ"** (ಲೂಕ. 1:47). ಯಾವ ಗಣನೆಗೆ ಬಾರದ ಗಲಿಲಾಯ ಸೀಮೆಯ ನಜರೇತಿನ ಕನ್ಯೆಯಾದ ಮರಿಯಳಿಗೆ ದೇವರ ದಯ ದೊರಕಿ ಪವಿತ್ರಾತ್ಮನಿಂದ ಗರ್ಭಧರಿಸಿ ಯೇಸುವಿನ ತಾಯಿಯಾಗುವುದಕ್ಕಾಗಿ ಆರಿಸಿರುವುದಕ್ಕಾಗಿ ಉಲ್ಲಾಸಗೊಂಡು ದೇವರಲ್ಲಿ ಸಂತೋಷಿಸಿದಳು. ಇಂದು ಅನೇಕರು ಕ್ರಿಸ್ತನಲ್ಲಿ ಬರುವ ಮೊದಲು ಹೀನಸ್ಥಿತಿಯಲ್ಲಿ ಬಡತದಲ್ಲಿ, ರೋಗಪೀಡಿತರಾಗಿ, ದೆವ್ವಪೀಡಿತರಾಗಿ, ಸಾಲಗಾರರಾಗಿ ಎಲ್ಲರಿಂದ ತಿರಸ್ಕರಿಸಲ್ಪಟ್ಟು ಕ್ರಿಸ್ತನಲ್ಲಿ ಬಂದು ಬಿಡುಗಡೆ, ಸಮಾಧಾನ, ಆರೋಗ್ಯ ಆಶೀರ್ವದಿಸಲ್ಪಟ್ಟು ಕರ್ತನ ಸನ್ನಿಧಿಗೆ ಬರುವಾಗ ತನ್ನ ಹಿಂದಿನ ಸ್ಥಿತಿಯನ್ನು ಮರೆತುಬಿಟ್ಟು ಹೋಗುವುದುಂಟು. ಸತ್ಯವೇದ ಹೇಳುತ್ತದೆ, **"ಹೀನಸ್ಥಿತಿಯಲ್ಲಿರುವ ಸಹೋದರನು ತಾನು ಉತ್ತಮ ಸ್ಥಿತಿಗೆ ಬಂದನೆಂದು ಉಲ್ಲಾಸಪಡಲಿ"** (ಯಾಕೋ. 1:9). ದೇವರು ಹೇಳುತ್ತಾನೆ, ನನ್ನ ನಾಮವನ್ನು ಘನಪಡಿಸಬೇಕೆಂಬ ಆಜ್ಞೆಯನ್ನು ನೀವು ಆಲಿಸಿ ಮಂದಟ್ಟು ಮಾಡಿಕೊಳ್ಳದಿದ್ದರೆ ನಾನು ನಿಮಗೆ ಶಾಪವನ್ನು ಬರಮಾಡುವೆನು. ನಿಮಗೆ ಆಶೀರ್ವಾದವಾಗಿ ದಯಪಾಲಿಸಿದವುಗಳನ್ನು ಶಪಿಸುವನು (ಮಲಾ. 2:2). ಕೆಲವರಂತೂ ಉದ್ಯೋಗವಿಲ್ಲದಿದ್ದಾಗ, ಸಾಲದಿಂದ ತುಂಬಿರುವಾಗ ಹೀನಸ್ಥಿತಿಯಲ್ಲಿಂದ ಉಪವಾಸ ಪ್ರಾರ್ಥನೆ, ಸಭೆಯ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸಿ ಬಿಡುಗಡೆಗಾಗಿ ಬಂದು ಕೊನೆಗೆ ಅವರು ಎಲ್ಲಾ ವಿಧದಿಂದಲೂ ಕರ್ತನಿಂದ ಆಶೀರ್ವದಿಸಲ್ಪಡುವಾಗ ಅವರೂ ಸಭೆಯಿಂದ ಬಿಡುಗಡೆಯಾಗಿ ಹೋಗುತ್ತಾರೆ. ದೇವ ಮಗುವೇ, ಎಚ್ಚರಿಕೆ ದೇವರು ನಿನಗೆ ಕೊಟ್ಟ ಆರೋಗ್ಯದಿಂದಾಗಲಿ, ಉದ್ಯೋಗದಿಂದಾಗಲಿ, ಆಶೀರ್ವಾದದಿಂದಾಗಲಿ ಕರ್ತನನ್ನು ಘನಪಡಿಸದಿದ್ದರೆ ಆ ನಿನ್ನ ಆಶೀರ್ವಾದವು ಶಾಪವಾಗಿ ಪರಿಣಮಿಸುತ್ತದೆ. ತಿಳಿದುಕೋ! **"ಅವರು ಯೆಹೋವನ ಕಾರ್ಯಗಳನ್ನು ಆತನ ಕೈಕೆಲಸಗಳನ್ನು ವಿವೇಚಿಸಿ ತಿಳಿದುಕೊಳ್ಳದೆ ಹೋದರು. ಆದುದರಿಂದ ಆತನು ಅವರನ್ನು ಹಾಳು ಮಾಡುವನೇ ಹೊರತು ವೃದ್ಧಿಪಡಿಸುವುದಿಲ್ಲ"** (ಕೀರ್ತ. 28:5).

ಮುಂದುವರಿಯುವದು.......

**ಪಾ॥ ರೊನಾಲ್ಡ್ ಮಚಾದೋ.**
ಬೇತೇಲ್ ಚರ್ಚ್ ಕಾಮಗೆರೆ.

ಆತನು ಅವನ ಎಲುಬುಗಳನ್ನೆಲ್ಲಾ ಕಾಪಾಡುತ್ತಾನೆ; ಅವುಗಳಲ್ಲಿ ಒಂದಾದರೂ ಮುರಿದುಹೋಗುವದಿಲ್ಲ (ಕೀರ್ತ. 34:20).

## ತಿಳುವಳಿಕೆಯ ಸ್ವರ

# ನಾವು ಯಾಕೆ ನೀರಿನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು?

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಯೇಸುವು ಹೊಸ ವಿಶ್ವಾಸಿಗಳಿಗೆ ದೀಕ್ಷಾಸ್ನಾನ ಮಾಡಿಸಬೇಕೆಂದು ಮತ್ತಾ. 28:19ರಲ್ಲಿ ಆಜ್ಞೆಯನ್ನು ಮಾಡಿದನು. ಎಲ್ಲಾ ಜನಾಂಗ ಮತ್ತು ಎಲ್ಲಾ ಸಂಸ್ಕೃತಿಗಳಲ್ಲೂ, ನೀರಿನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದು ಮಾನಸಾಂತರ ಹೊಂದಿದ್ದಕ್ಕೆ ಸಾಕ್ಷಿಯಾಗಿರುವ ಕ್ರಿಯೆಯಾಗಿದ್ದು ಆತನ ಹಳೆಯ ನಂಬಿಕೆಯಿಂದ, ಕ್ರೈಸ್ತ ನಂಬಿಕೆಗೆ ಸೇರುವ ಸೂಚಕವಾಗಿದೆ.

ಇದು ರಕ್ಷಣೆಗೆ ಅವಶ್ಯಕವಾದ ಪ್ರಾರಂಭದ ಹೆಜ್ಜೆಯಾಗಿದೆ (ಅ.ಕೃ. 2:38). ಯೇಸುವು ರಕ್ಷಣೆಯ ವಾಗ್ದಾನಕ್ಕೂ ನೀರಿನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದಕ್ಕೂ ಸಂಬಂಧ ಕಲ್ಪಿಸಿದ್ದಾನೆ. (ಮಾರ್ಕ. 16:16) ಸಭಾ ಚರಿತ್ರೆಯಲ್ಲಿ ದೀಕ್ಷಾಸ್ನಾನವೆಂಬುದು ಕೃಪೆಯ ಸಾಧನವಾಗಿದ್ದು ದೇವರ ಕೃಪಾತೀಶಯವು ದೊರಕುವದಕ್ಕೆ ಇದೊಂದು ಮಾರ್ಗವಾಗಿದೆ. ದೇವರ ಕೃಪೆಯ ಸಾಧನಕ್ಕೆ, ದೇವರ ವಾಕ್ಯವೇ ಅತಿ ಮುಖ್ಯವಾದದ್ದು ಎಂದು ಅನೇಕ ಕ್ರೈಸ್ತರು ವಿಶ್ವಾಸಿಸುತ್ತಾರೆ (ರೋಮಾ. 10:17, 1ನೇ ಪೇತ್ರ. 1:23). ಈ ಕ್ರೈಸ್ತರು ದೇವರ ಕೃಪೆಯು ನಮಗೆ ನೀರಿನ ದೀಕ್ಷಾಸ್ನಾನದ ಮೂಲಕವು ಸಹ ಬರುತ್ತದೆಂದು ನಂಬುತ್ತಾರೆ. ನೀರಿನಿಂದ ದೀಕ್ಷಾಸ್ನಾನ ಮಾಡಿಸುವಲ್ಲಿ ಬರೆದಿರುವಂತಹ ದೇವರ ವಾಕ್ಯವೇ ಮುಖ್ಯವಾಗಿರುವಂತದ್ದು (ಎಫೆ. 5:26).

ನೀರಿನ ದೀಕ್ಷಾಸ್ನಾನವು ಹೊರಗೆ ತೋರುವಂತಹ ಮತ್ತು ಕಾಣುವಂತಹ ಒಂದು ಕ್ರಿಯೆಯಾಗಿರುವಂತದ್ದಾಗಿದ್ದು ಇದು ಅಂತರಿಕವಾದ ಮತ್ತು ಆತ್ಮೀಯ ವರವಾಗಿದ್ದು ಇದು ಕ್ರಿಸ್ತನ ಮರಣ ಮತ್ತು ಪುನರುತ್ಥಾನ, ಪಾಪಗಳ ಪರಿಹಾರ ಮತ್ತು ಆತ್ಮೀಯ ರೀತಿಯಲ್ಲಿ ಸಭಾ ಸದಸ್ಯತ್ವವನ್ನು ಸೂಚಿಸುವಂತದ್ದಾಗಿದೆ ಎಂದು ಈ ಕ್ರೈಸ್ತರು ಮಾತನಾಡಿ ಕೊಳ್ಳುತ್ತಾರೆ.

ಈ ಕ್ರೈಸ್ತರು ಇನ್ನು ವಿಶ್ವಾಸಿಸುವುದೇನೆಂದರೆ, ನಂಬಿಕೆಯ ಮೂಲಕ ದೀಕ್ಷಾಸ್ನಾನ ಮಾಡಿಸಿಕೊಂಡಾಗ ನಮ್ಮ ಜೀವನವು ನಿಜವಾಗಿ ಹೂಣಿಟ್ಟದ್ದಾಗಿಯೂ ಮತ್ತು ಕ್ರಿಸ್ತನೊಡನೆ ಪುನರುತ್ಥಾನವಾದದ್ದು ಆಗುತ್ತದೆ. ರೋಮಾ. 6:3–4, ಕೊಲ. 2:12, ಮತ್ತು ಕ್ರಿಸ್ತನಿಂದ ಧರಿಸಲ್ಪಟ್ಟವರಾಗುತ್ತೇವೆ (ಗಲಾ. 3:27). ಅ.ಕೃ. 2:38ರಲ್ಲಿ ಪೇತ್ರನು, ನಾವೆಲ್ಲರೂ ನಮ್ಮ ಪಾಪಗಳ ಕ್ಷಮೆಗಾಗಿ, ನೀರಿನಿಂದ ಮಾಡಿಸಿಕೊಳ್ಳಬೇಕೆಂದು ಕರೆ ಕೊಟ್ಟ ಮೇರೆಗೆ, ನಾವು ಪಾಪಕ್ಕೆ ಒಂದು ವಿಶೇಷವಾದ ರೀತಿಯಲ್ಲಿ ಕ್ಷಮೆಯನ್ನು ಪಡೆಯುತ್ತೇವೆ. 1ನೇ ಪೇತ್ರ. 3:21ರಲ್ಲಿ ಪೇತ್ರನು, ಈಗಲೂ ನಿನ್ನನ್ನು ರಕ್ಷಿಸಲು ಮಾಡಿಸಿಕೊಳ್ಳಬೇಕಾದ ದೀಕ್ಷಾಸ್ನಾನದ ಬಗ್ಗೆ ಬರೆಯುತ್ತಾನೆ. ಇದು ಕ್ರಿಸ್ತನ ಪುನರುತ್ಥಾನದ ಮೂಲಕ ರಕ್ಷಣೆ ಕೊಡುತ್ತದೆ. ಪೇತ್ರನು ಹೇಳುವುದು, ನೀರಿನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದು, ಶರೀರದ ಕಲ್ಮಶಗಳನ್ನು ತೆಗೆದು ಹಾಕುವುದಕ್ಕಲ್ಲ. ಆದರೆ ಇದು ಪ್ರತ್ಯಕ್ಷವಾಗಿ, ಆತ್ಮೀಕವಾಗಿ ಶುದ್ಧಿಕರಿಸಿಕೊಳ್ಳುವಂತದ್ದಾಗಿದ್ದು ಇದರ ಪರಿಣಾಮವೇ ಒಳ್ಳೆಯ ಮನಸ್ಸಾಕ್ಷಿ.

ಆದುದರಿಂದ ನೀರಿನಿಂದ ದೀಕ್ಷಾಸ್ನಾನ ಹೊಂದಿದಾಗ, ನಮ್ಮ ಪಾಪಗಳು ನಿಜವಾಗಿಯೂ ತೊಳೆಯಲ್ಪಡುತ್ತವೆಯೆಂದು ಮತ್ತು ನಮ್ಮ ಚಿತ್ತವು ನಿಜವಾಗಿ ಸ್ವಚ್ಚಗೊಳ್ಳುತ್ತದೆ. ಅ.ಕೃ. 22:16, ಎಫೆ. 5:26 ತೀತ. 3:5, ಇಬ್ರಿ. 10:22 ಎಂದು ಹೇಳುತ್ತಾರೆ. ಇವರ ಅಭಿಪ್ರಾಯದ ಪ್ರಕಾರ, ದೀಕ್ಷಾಸ್ನಾನ ಒಂದು ಆತ್ಮೀಕವಾದಂತ ಸುನ್ನತಿಯಾಗಿದ್ದು, ಪಾಪಮಯವಾದ ನಮ್ಮ ಸ್ವಭಾವವನ್ನು ತೆಗೆದುಹಾಕುವುದೇ ಆಗಿದೆ (ಕೊಲೆ. 2:11–12). ಯೇಸು ಹೀಗೆ ಹೇಳಿದ್ದಾನೆ, ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹೊಸದಾಗಿ ಹುಟ್ಟದಿದ್ದರೆ, ಆತನು ಪರಲೋಕ ರಾಜ್ಯಕ್ಕೆ ಸೇರಲಾರನು (ಯೋಹಾ. 3:5). ವಚನದಲ್ಲಿ ಕೊಟ್ಟಿರುವ ನೀರು, ದೀಕ್ಷಾಸ್ನಾನಕ್ಕೆ ಹೋಲಿಕೆಯಾಗಿದೆ ಎಂದು ಈ ಕ್ರೈಸ್ತರು ತಿಳಿಯುತ್ತಾರೆ. ಬರೀ ನೀರಿನಿಂದ ಯಾವ ಪರಿಣಾಮವಾಗುವುದಿಲ್ಲ ಆದರೆ ದೀಕ್ಷಾಸ್ನಾನದ ನೀರು, ದೇವರು ಆತನ ವಾಕ್ಯದ ಮೂಲಕ ಕೊಟ್ಟ ಆಜ್ಞೆಯನ್ನು, ವಾಗ್ದಾನವನ್ನು ಸೂಚಿಸಲು ಉಪಯೋಗಿಸಲಾಗಿದೆ ಮಾರ್ಕ. 16:16, ಎಫೆ. 5:13 ಮತ್ತು ಈ ಕಾರಣದಿಂದಲೇ ಇದು ಕಾರ್ಯಪ್ರವೃತ್ತ ವಾಗುತ್ತದೆ. ದೀಕ್ಷಾಸ್ನಾನದಲ್ಲಿ ದೇವರು ತನ್ನ ಕೃಪೆಯನ್ನು ಕೊಡಲು ಮುಂದಾಗುತ್ತಾನೆ. ಆದರೆ ಈ ಕೃಪೆಯನ್ನು ಹೊಂದಲು ನಂಬಿಕೆಯುಬೇಕು. ದೇವರ ವಾಗ್ದಾನದ ವಾಕ್ಯದ ಮೇಲೆ ನಂಬಿಕೆಯಿಲ್ಲದಿದ್ದರೆ ನಮಗೆ ಯಾವ ಪ್ರಯೋಜನವಿಲ್ಲ. ನೀರಿನಿಂದಾದ ದೀಕ್ಷಾಸ್ನಾನವು ದೇವರ ವಾಗ್ದಾನದ ವಾಕ್ಯಗಳ ಮೇಲೆ ನಾವು ಇಟ್ಟಿರುವ ನಮ್ಮ ನಂಬಿಕೆಯನ್ನು ಬಲಪಡಿಸುತ್ತದೆ.

ಕ್ರಿಸ್ತನಲ್ಲಿ (ಯೋಹಾ. 1:2, 3:16, ರೋಮ 10:9–10) ಅಥವಾ ದೇವರ ವಾಕ್ಯದಲ್ಲಿ (ರೋಮ. 1:16, 10:17, 1 ಪೇತ. 1:23).

ಇಡುವ ನಂಬಿಕೆಯ ಮೂಲಕವಾಗಿ ಮಾತ್ರ ದೇವರ

ಯೆರೂಸಲೇಮಿನ ಶುಭಕ್ಕೋಸ್ಕರ ಪ್ರಾರ್ಥಿಸಿರಿ. ಯೆರೂಸಲೇಮೇ, ನಿನ್ನನ್ನು ಪ್ರೀತಿಸುವವರಿಗೆ ಸೌಭಾಗ್ಯವುಂಟಾಗಲಿ (ಕೀರ್ತ. 122:6).

ಆಶೀರ್ವಾದವನ್ನು ಹೊಂದಲು ಸಾಧ್ಯ ಎಂದು ಸತ್ಯವೇದದಲ್ಲಿ ಅನೇಕ ಕಡೆ ತಿಳಿಸಲ್ಪಟ್ಟಿರುವುದರಿಂದ ನೀರಿನ ದೀಕ್ಷಾಸ್ನಾನದಲ್ಲಿ ದೇವರ ವಿಶೇಷವಾದ ಕೃಪೆಯುಂಟೆಂಬುದನ್ನು ಇನ್ನು ಅನೇಕ ಕ್ರೈಸ್ತರು ನಂಬುವುದಿಲ್ಲ. ದೇವರ ವಾಕ್ಯವನ್ನು ಕೇಳುವುದು ಮತ್ತು ಕ್ರಿಸ್ತನಲ್ಲಿ ನಂಬಿಕೆ ಇಡುವುದು, ಇವುಗಳೇ ರಕ್ಷಣೆಗೆ ಅಗತ್ಯವಾದವುಗಳಾಗಿದ್ದು, ನಾವು ನಂಬಿದಾಗ ನಮ್ಮಲ್ಲಿ ಏನೆಲ್ಲಾ ಆಗುತ್ತದೆ ಎಂಬುದಕ್ಕೆ ನೀರಿನ ದೀಕ್ಷಾಸ್ನಾನವು ಬರೀ ಒಂದು ಗುರುತು ಅಥವಾ ತೋರಿಕೆಯಾಗಿದೆ ಎಂದು ಈ ಕ್ರೈಸ್ತರು ನಂಬುತ್ತಾರೆ. ಇವರ ಅಭಿಪ್ರಾಯದಂತೆ, ನೀರಿನ ದೀಕ್ಷಾಸ್ನಾನವು ನಿಜವಾಗಿ ನಮ್ಮನ್ನು ಶುದ್ಧಗೊಳಿಸದು ಮತ್ತು ವಿಶೇಷ ರೀತಿಯಲ್ಲಿ ಪಾಪ ಪರಿಹಾರ ದೊರಕಿಸಿಕೊಡದು. ಇದು, ನಾವು ಕ್ರಿಸ್ತನೊಡನೆ ಸಾಯುವುದಕ್ಕಾಗಿ, ಆತನನ್ನು ಧರಿಸುವುದಕ್ಕಾಗಿ ಮತ್ತು ಆತನಿಂದ ಸುನ್ನತಿಯ ಚಿನ್ಹೆ ಆಗಿದೆ. ಇದು ನಮ್ಮ ನಂಬಿಕೆಯನ್ನು ತೋರಿಸುವ ಹೊರಗಿನ ಗುರುತಾಗಿದೆ (ರೋಮ. 6:3–5, ಗಲಾ. 3:27, 1 ಕೊಲ. 2:11–12). ಕೆಲವರು ಯೋಹಾ. 3:5ರಲ್ಲಿ ಉಲ್ಲೇಖಿಸಿರುವ ನೀರಿನಿಂದ ಹುಟ್ಟುವುದು ಎಂಬುವುದು ನಮ್ಮ ಶಾರೀರಿಕ ಜನನ, ಎಂದು ಅರ್ಥೈಸುತ್ತಾರೆ ಮತ್ತು ಇನ್ನಿತರರು ನೀರು ದೇವರ ವಾಕ್ಯವನ್ನು ಸೂಚಿಸುತ್ತದೆ ಎಂದು ನಂಬುತ್ತಾರೆ.

ಇನ್ನು ಕೆಲವರು, ನೀರು ದೇವರ ವಾಕ್ಯಕ್ಕೆ ಹೋಲಿಕೆಯಾಗಿದೆ ಎಂದು ನಂಬುತ್ತಾರೆ. ಈ ಕ್ರೈಸ್ತರಲ್ಲಿಯೂ ಕೆಲವರು, ಕ್ರಿಸ್ತನಲ್ಲಿ ಒಬ್ಬನು ಇಟ್ಟಿರುವ ನಂಬಿಕೆಗೆ ನೀರಿನ ದೀಕ್ಷಾಸ್ನಾನವು ಲೋಕಕ್ಕೆ ಸಾಕ್ಷಿಯಾಗಿದೆಯಾದ್ದರಿಂದ ಇದನ್ನು ಪ್ರತ್ಯೇಕವಾಗಿ ಮಾಡದೆ, ಸಾರ್ವಜನಿಕರ ಎದುರಿನಲ್ಲಿ ಬಹಿರಂಗವಾಗಿ ಮಾಡಬೇಕೆಂದು ಹೇಳುತ್ತಾರೆ. ದೇವರು ಮಾಡಿಕೊಂಡ ಈ ಒಡಂಬಡಿಕೆಗೇ ಹಳೇ ಒಡಂಬಡಿಕೆಯಲ್ಲಿನ ಯೆಹೂದ್ಯರ ಸುನ್ನತಿಯು ಹೇಗೆ ಗುರುತಾಗಿತ್ತೋ ಹಾಗೆಯೇ ದೀಕ್ಷಾಸ್ನಾನವು ಸಹ ದೇವರು ತನ್ನ ಜನರೊಂದಿಗೆ ಮಾಡಿಕೊಂಡ ಒಡಂಬಡಿಕೆಗೆ ಗುರುತಾಗಿದೆ ಎಂದು ಕೆಲವು ಕ್ರೈಸ್ತರು ನಂಬುತ್ತಾರೆ. ಕೊಲೆ. 2:11–13 ರಲ್ಲಿನ ವಚನಗಳಿಂದ ಇವರು ತಮ್ಮ ಈ ದೃಷ್ಟಿಕೋನವನ್ನು ಸಮರ್ಥಿಸಿಕೊಳ್ಳುತ್ತಾರೆ.

ಮುಂದುವರಿಯುವದು....

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

---

**ಆರೋಗ್ಯ ಸ್ವರ**

## ನೆಲಗಡಲೆ ! ನಿನ್ನ ಕುರಿತು ಅದೆಷ್ಟು ಹೇಳಲೆ?!

ರುಚಿಕರ, ಪೌಷ್ಟಿಕ 'ನೆಲಗಡಲೆ' ಬಡವರ ಬಾದಾಮಿ ಎಂದೇ ಜನಜನಿತ. ಇದರಲ್ಲಿ ಮಾಂಸ ಅಥವಾ ಸೋಯಾಬೀನ್‌ಗಿಂತ ಅಧಿಕ ಪ್ರೋಟಿನ್ ಇದೆ. ಮೊಟ್ಟೆಗಿಂತ ಎರಡೂವರೆಪಟ್ಟು ಅಧಿಕ ಪ್ರೊಟೀನ್‌ನಿಂದ ನೆಲಗಡಲೆ ಸಮೃದ್ಧವಾಗಿದೆ.

ನೆಲಗಡಲೆಯ ಕುರಿತಾಗಿ ಮಿಥ್ಯೆ ಇದೆ. ನೆಲಗಡಲೆ ತಿಂದರೆ, ನೆಲಗಡಲೆ ಎಣ್ಣೆ ಸೇವಿಸಿದರೆ ಕೊಬ್ಬಿನ ಅಂಶ ಹೆಚ್ಚುತ್ತದೆ ಎಂದು. ಆದರೆ ಸಂಶೋಧನಾ ವರದಿಯ ಪ್ರಕಾರ ನೆಲಗಡಲೆಯಲ್ಲಿ ಮೊನೋ ಅನ್ ಸ್ಯಾಚುರೇಟೆಡ್ ಫ್ಯಾಟ್ ಎಂಬ ಕೊಬ್ಬಿನ ಅಂಶವಿದ್ದು, ಇದು ಆರೋಗ್ಯಕ್ಕೆ ಹಿತಕರವಾದ, ದೇಹಕ್ಕೆ ಅಗತ್ಯವಾದ ಕೊಬ್ಬು ಪುನ: ಪುನ: ಅದೇ ಎಣ್ಣೆಯಲ್ಲಿ ಕರಿಯುವುದು ಒಳ್ಳೆಯದಲ್ಲ. ಒಂದು ಬಾರಿ ಕರಿದ ಬಳಿಕ ದೋಸೆಗೋ, ಪಲ್ಯಕ್ಕೋ ಉಪಯೋಗಿಸಬೇಕು.

ನೆಲಗಡಲೆಯಲ್ಲಿ ಅಧಿಕ ಆ್ಯಂಟಿ ಆಕ್ಸಿಡೆಂಟ್ಸ್‌ಗಳು ಇರುವುದರಿಂದ ಹೃದಯ ಸಂಬಂಧಿ ಕಾಯಿಲೆ, ಕ್ಯಾನ್ಸರ್ ಮುಂತಾದ ರೋಗಗಳನ್ನು ತಡೆಗಟ್ಟುವಲ್ಲಿ ಸಹಾಯಕ. ಇದರಲ್ಲಿರುವ "ರೆಸ್ವರೆಟ್ರಾಲ್" ಎಂಬ ದ್ರವ್ಯದಿಂದಾಗಿ ಹೃದಯಘಾತವಾಗುವುದು ಕಡಿಮೆಯಾಗುತ್ತದೆ. ಇದು ಕ್ರಯಾನ್ಸರ್ ಪ್ರತಿಬಂಧಕ ಹಾಗೂ ವಯ:ಸ್ಥಾಪಕವೂ ಹೌದು, ಅಂದರೆ ಇದು ಮುಪ್ಪನ್ನೂ ಮುಂದೂಡುತ್ತದೆ.

ದೇಹದ ಕೋಶಗಳಲ್ಲಿ ನಡೆಯುವ ರಿಪೇರಿ ಹಾಗೂ ಸಮತೋಲನಗೊಳಿಸುವ ಕಾರ್ಯಗಳಲ್ಲಿ 5 ಮುಖ್ಯ ಆಹಾರದ ಅಂಶಗಳು ಬೇಕಾಗಿವೆ. ಅವುಗಳೆಂದರೆ ಆಹಾರ ರಸದಿಂದ ಶಕ್ತಿ ಉತ್ಪಾದನೆ, ಪ್ರೊಟೀನ್, ಫಾಸ್ಫರಸ್, ಥಯಾಮಿನ್ ಮತ್ತು ನಿಯೊಸಿನ್. ಇವುಗಳು ನೆಲಗಡಲೆಯಲ್ಲಿ ಅಧಿಕವಾಗಿವೆ.

**100 ಗ್ರಾಂ ನೆಲಗಡಲೆಯಲ್ಲಿರುವ ವಿವಿಧ ಪೌಷ್ಟಿಕಾಂಶಗಳು:**

| | | |
|---|---|---|
| 1. | ಶರ್ಕರಪಿಷ್ಟ | – 16.13ಗ್ರಾಂ. |
| 2. | ಕ್ಯಾಲ್ಸಿಯಂ | – 9.3ಗ್ರಾಂ. |
| 3. | ತಾಮ್ರ | – 11.44 ಮಿ.ಗ್ರಾಂ. |
| 4. | ಕೊಬ್ಬಿನಾಂಶ | – 49.24ಗ್ರಾಂ. |
| 5. | ನಾರಿನ ಅಂಶ | – 8.5ಗ್ರಾಂ |
| 6. | ಕಬ್ಬಿಣ ಸತ್ವ | – 4.58 ಮಿ.ಗ್ರಾಂ |
| 7. | ಮ್ಯಾಗ್ನೀಶಿಯಂ | – 168 ಮಿ.ಗ್ರಾಂ |
| 8. | ಮ್ಯಾಂಗನೀಸ್ | – 1.93 ಮಿ.ಗ್ರಾಂ |
| 9. | ಫಾಸ್ಫರಸ್ | – 376 ಮಿ.ಗ್ರಾಂ |
| 10. | ಪೊಟ್ಯಾಶಿಯಂ | – 705 ಮಿ.ಗ್ರಾಂ |

ಯೆಹೋವನು ಇಂದಿನಿಂದ ಸದಾಕಾಲವೂ ತನ್ನ ಜನರ ಸುತ್ತಲೂ ಇರುವನು.
(ಕೀರ್ತ. 125:2).

11. ಪ್ರೋಟೀನ್ – 25.80 ಗ್ರಾಂ.
12. ಸೋಡಿಯಂ – 18 ಮಿ.ಗ್ರಾಂ.
13. ನೀರಿನಂಶ – 6.50 ಮಿ.ಗ್ರಾಂ.
14. ಸತು – 3.27 ಮಿ.ಗ್ರಾಂ.

ದೇಹಕ್ಕೆ ಅಗತ್ಯವಿರುವ 13 ಜೀವಸತ್ವಗಳನ್ನೂ (ಎ,ಬಿ,ಸಿ,ಡಿ,ಇ) ಹಾಗೂ 26 ಖನಿಜಾಂಶಗಳನ್ನೂ (ಕ್ಯಾಲ್ಸಿಯಂ, ಕಬ್ಬಿಣ ಸತ್ವ, ಸತು ಬೋರಾನ್ ಮುಂತಾದ) ನೆಲಗಡಲೆ ಹೊಂದಿದೆ. ಕೃಷಿಯಲ್ಲಿ ಗೊಬ್ಬರ ತಯಾರಿಸಲು, ಪಶುಸಂಗೋಪನೆಯಲ್ಲಿ ಆಹಾರವಾಗಿ ನೆಲಗಡಲೆ ಹಿಂಡಿ ವಿಶೇಷವಾಗಿ ಬಳಕೆಯಲ್ಲಿದೆ.

**ಮನೆ ಮದ್ದಿನಲ್ಲಿ ನೆಲಗಡಲೆಯ ಉಪಯೋಗ**

ಹಸಿ ನೆಲಗಡೆಯನ್ನು 10–12 ನಿತ್ಯವೂ ಸೇವಿಸಿದರೆ ಮಧುಮೇಹಿಗಳಿಗೆ ಹಿತಕರ. ಹಸಿ ನೆಲಗಡಲೆಯಲ್ಲಿ ಶರ್ಕರ ಪಿಷ್ಟ ಅತೀ ಕಡಿಮೆ ಇದ್ದು ಪ್ರೋಟೀನ್ ಅಧಿಕವಾಗಿರುವುದರಿಂದ ಶಕ್ತಿಯ ಮೂಲವಾಗಿ ಹಸಿ ನೆಲಗಡಲೆ ಮಧುಮೇಹಿಗಳಲ್ಲಿ ಹಿತಕರ.

ಗರ್ಭಿಣಿ ಮತ್ತು ಬಾಣಂತಿಯರಲ್ಲಿ ನೆಲಗಡಲೆಯನ್ನು ಹುರಿದು ಬೆಲ್ಲ ತುಪ್ಪ ಸೇರಿಸಿ ಸೇವಿಸಲು ನೀಡಿದರೆ ಉತ್ತಮ ಪೌಷ್ಟಿಕ ಆಹಾರ.

ಕೈಕಾಲುಗಳು ಬಲಹೀನವಾಗಿರುವ ಮಕ್ಕಳಿಗೆ ಬೆಚ್ಚಗೆ ಮಾಡಿದ ನೆಲಗಡಲೆ ಎಣ್ಣೆಯನ್ನು ಕೈಕಾಲುಗಳಿಗೆ ಹಚ್ಚಿ ಚೆನ್ನಾಗಿ ಮಾಲೀಶು ಮಾಡಿ ಎಳೆ ಬಿಸಿಲಿನಲ್ಲಿ ಕುಳ್ಳಿರಿಸಬೇಕು. ಇದರಿಂದ ಕೈಕಾಲಗಳು ಶಕ್ತಿಯುತವಾಗುತ್ತದೆ.

ನೆಲಗಡಲೆ, ಬಾದಾಮಿ, ಗೋಡಂಬಿ 3:2:1 ಅನುಪಾತದಲ್ಲಿ ತೆಗೆದುಕೊಂಡು ಹುರಿದು, ಆರಿದ ಮೇಲೆ ಹುಡಿ ಮಾಡಿ ಇಡಬೇಕು. ಇದನ್ನು 2 ಚಮಚದಷ್ಟು ಹಾಲಿಗೆ ಬೆರೆಸಿ, ಕಲ್ಲುಸಕ್ಕರೆ ಹುಡಿ ಸೇರಿಸಿ ಕುಡಿದರೆ ಬೆಳೆಯುವ ಮಕ್ಕಳಿಗೆ ಉತ್ತಮ ಪೌಷ್ಟಿಕ ಪೇಯ.

ಪುಟ್ಟ ಮಕ್ಕಳಿಗೆ ತಯಾರಿಸುವ ಮಣ್ಣಿಯಲ್ಲಿ ರಾಗಿ, ಅಕ್ಕಿ ಗೋಧಿ, ಹೆಸರು ಇತ್ಯಾದಿಗಳಲ್ಲಿ ಜೊತೆಗೆ ನೆಲಗಡೆಯನ್ನು ಹುರಿದು ಹುಡಿ ಮಾಡಿ ಬೆರೆಸುವುದರಿಂದ ಮಣ್ಣಿ (ಮಕ್ಕಳ ಆಹಾರ) ಹೆಚ್ಚು ಸತ್ವಯುತವಾಗುತ್ತದೆ.

ಹುರಿದ ನೆಲಗಡೆಲೆ ಸೇವಿಸಿದವರಿಗೆ ಪಿತ್ತದ ಭಾದೆ ಉಂಟಾಗುತ್ತಿದ್ದರೆ, ನೆಲಗಡಲೆ ತಿಂದ ಬಳಿಕ ಬೆಲ್ಲವನ್ನು ಸೇವಿಸಬೇಕು.

ನೆಲಗಡಲೆ ತಿಂದ ಬಳಿಕ ನೀರು ಕುಡಿದರೆ ಅಜೀರ್ಣವಾಗಿ ಭೇದಿ ಉಂಟಾಗುವುದರಿಂದ ಮಕ್ಕಳಲ್ಲಿ ನೆಲಗಡಲೆ ಸೇವಿಸಿದ ಕೂಡಲೇ ನೀರನ್ನು ಕುಡಿಯಲು ನೀಡಕೂಡದು.

ನೆಲಗಡಲೆಯನ್ನು ಹುರಿದು ಬೆಲ್ಲ ಬೆರೆಸಿ ಸೇವಿಸಿ, ಆಡಿನ ಹಾಲು (ವಿಶೇಷತ) ಅಥವಾ ಹಸುವಿನ ಹಾಲನ್ನು ಕುಡಿದರೆ ಕ್ಷಯರೋಗ ಡೆಪೆಟೈಟಿಸ್ ಮುಂತಾದ ರೋಗಗಳಲ್ಲಿ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ.

ಹಸಿ ನೆಲಗಡಲೆ ಮತ್ತು ಹಸಿ ಎಳೆ ಜೋಳ ಸೇವಿಸಿದರೆ ಬಾಣಂತಿಯರಲ್ಲಿ ಹಾಲು ಹೆಚ್ಚುತ್ತದೆ.

– ಸಂಗ್ರಹ.

# ಪುನರ್‌ಸ್ಥಾಪನೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಅತೀ ಬೇಗನೇ ಬಂದು ನಮ್ಮನ್ನು ಕರೆದುಕೊಂಡು ಹೋಗುವ ಯೇಸು ಕ್ರಿಸ್ತನ ಸುಮಧುರ ನಾಮದಲ್ಲಿ ದೇವರ ಸ್ವರ ಓದುವ ನನ್ನ ಪ್ರೀತಿಯ ಯೌವನಸ್ಥ ಹಾಗೂ ಯೌವನಸ್ಥೆಯರಿಗೆ ಪ್ರೀತಿಯ ವಂದನೆಗಳು.

ನಮ್ಮ ಆತ್ಮೀಕ ಮತ್ತು ಲೌಕಿಕ ಜೀವಿತದಲ್ಲಿ ಇಂದು ನಾವು ಬದಲಾವಣೆಯನ್ನು ಕಾಣಬೇಕಾದರೆ ಮೊದಲು ನಮ್ಮನ್ನು ನಾವೆ ಸಜೀವ ಯಜ್ಞವಾಗಿ ಅರ್ಪಿಸಬೇಕಾಗಿದೆ. (ಇಬ್ರಿ. 12:1–2).

ನಾವು ಆತ್ಮೀಕ ಜೀವಿತದಲ್ಲಿ ಆತನೊಂದಿಗಿರುವ ಆತ್ಮೀಕ ಮಟ್ಟವನ್ನು ಹೆಚ್ಚಿಸಬೇಕಾಗಿದೆ. ಆತನಲ್ಲಿದ್ದುಕೊಂಡು ನಾವು ಆತ್ಮೀಕತೆಯಲ್ಲಿ ಬೆಳೆಯಬೇಕಾಗಿದೆ. ದಿನೇ ದಿನೇ ನಾವು ಆತನಂತೆ ಮಾರ್ಪಾಡಾಗಬೇಕಾಗಿದೆ. ನಾವು ಆತನಂತೆ ಮಾರ್ಪಡುವಾಗ ಲೋಕದ ಪಾಲಿಗೆ ನಾವು ಸಾಯುತ್ತೇವೆ. ಲೋಕದ ಇಚ್ಛೆಗಳಿಗೆ ಸಾಯುತ್ತೇವೆ. ಹಿಂಸೆಯೋ, ಕಷ್ಟವೋ, ಸಂಕಟವೋ ನಮ್ಮನ್ನು ಕ್ರಿಸ್ತನ ಪ್ರೀತಿಯಿಂದ ಅಗಲಿಸಲಾರವು **"ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು?** **ಕಷ್ಟವೋ ಸಂಕಟವೋ ಹಿಂಸೆಯೋ ಅನ್ನವಿಲ್ಲದಿರುವದೋ ವಸ್ತ್ರವಿಲ್ಲದಿರುವದೋ ಗಂಡಾಂತರವೋ ಖಡ್ಗವೋ?. ನಿಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ"** (ರೋಮ. 8:35–37).

ಇತ್ತೀಚಿನ ದಿನಗಳಲ್ಲಿ ನಾವು ಕಾಣುವಂತ ಕೊರತೆ ಏನೆಂದರೆ ಪ್ರೀತಿ, ನಂಬಿಕೆ ಆದರೆ ಕ್ರಿಸ್ತನಲ್ಲಿರುವವರಿಗೆ ನಿರೀಕ್ಷೆ ಇದೆ. ಆತನ ವಾಕ್ಯ ಹೇಳುವ ಪ್ರಕಾರ (ಯೋಹಾ.15:7). **"ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ**

ಹೃದಯ ಶುದ್ಧಿಯನ್ನಪೇಕ್ಷಿಸುವ ಸವಿಮಾತಾಡುವ ಮನುಷ್ಯನಿಗೆ ರಾಜನ ಸ್ನೇಹವು ದೊರೆಯುವದು (ಜ್ಞಾನೋ. 22:11).

**ಏನು ಬೇಕಾದರೂ ಬೇಡಿಕೊಳ್ಳಿರಿ. ಅದು ನಿಮಗೆ ದೊರೆಯುವುದು.** ಹೌದು ಲೋಕದ ಜನರಿಗೆ ಇಲ್ಲದ ನಿರೀಕ್ಷೆ ನಮಗಿದೆ. ಇಲ್ಲಿ ನಾವು ದೇವರ ವಾಕ್ಯ ಹೇಳುವ ಪ್ರಕಾರ ದೇವರ ವಾಕ್ಯ ನಮ್ಮಲ್ಲಿ ನೆಲೆಗೊಂಡಿರಬೇಕು; ನೆಲೆಗೊಳ್ಳುವುದು ಹೇಗೆ? ನಮ್ಮ ಸಭೆಯಲ್ಲಿ ನಡೆದ ಒಂದು ಸಂಭವವನ್ನು ಉದಾಹರಣೆಯಾಗಿ ಹೇಳಲು ಬಯಸುತ್ತೇನೆ. ನಮ್ಮ ಸಭೆಗೆ ಪ್ರಸಂಗಿಸಲು ಬಂದವರೊಬ್ಬರು ಒಂದು ಪ್ರಶ್ನೆಯನ್ನು ಸಭೆಗೆ ಕೇಳಿದರು. ಅದು ಯಾವುದೆಂದರೆ ಇಲ್ಲಿ ಎಷ್ಟು ಮಂದಿ ಎದೆ ತಟ್ಟಿ ಹೇಳಬಹುದು ನಾನು ಸತ್ಯವೇದವನ್ನು ಸಂಪೂರ್ಣವಾಗಿ ಓದಿ ಮುಗಿಸಿದ್ದೇನೆಂದು? ನಾನು ಪ್ರಶ್ನೆಯನ್ನು ಕೇಳುತ್ತೇನೆ ಎಂದು ಹೇಳಿದಾಗ ಸಭೆಯಲ್ಲಿ ಇಬ್ಬರು ಸ್ತ್ರೀಯರು ಕೈ ಮೇಲಕ್ಕೆತ್ತಿದರು. ಆದರೆ ಒಂದು ಸಂಭವವನ್ನು ಹೇಳಿ ಆ ಸಂಭವವು ಯಾವು ಅಧ್ಯಾಯದಲ್ಲಿ ಬರುತ್ತದೆ ಎಂದು ಕೇಳಿದಾಗ ಅವರು ಉತ್ತರಿಸಲಾಗಲಿಲ್ಲ. ಅದಕ್ಕರು ಹೇಳಿದ ಮಾತು. ಕಬ್ಬನ್ನು (Sugar Cane) ಹೇಗೆ ಒಂದು ಸಾರಿ ಹಾಕಿ ರಸ ತೆಗೆಯದೆ ಪದೆ ಪದೆ ಯಂತ್ರಕ್ಕೆ (Machine) ಗೆ ಹಾಕಿ ತೆಗೆಯುತ್ತಾರೋ ಅದೇ ರೀತಿ ಸತ್ಯವೇದ (Bible) ಧ್ಯಾನಿಸಬೇಕು ಎಂದು ಹೇಳಿದರು. ಅದೇ ದೇವರ ವಾಕ್ಯದಲ್ಲಿ ನೆಲೆಗೊಂಡಿರುವುದರ ಅರ್ಥ ಎಂದು ವಿವರಿಸಿದರು. ನಾವು ಯಾವಾಗ ವಾಕ್ಯವನ್ನು ನಮ್ಮ ಹೃದಯದಲ್ಲಿ ಇಟ್ಟುಕೊಳ್ಳುತ್ತೇವೋ ಆಗ ನಾವು ಅದರಂತೆ ನಡೆಯಲು ಸಾಧ್ಯವಿದೆ. ದೇವರ ವಾಕ್ಯದಲ್ಲಿ ನಾವು ನೋಡುತ್ತೇವೆ. **"ಪ್ರೀತಿ ಸತ್ಯತೆಗಳು ನಿನ್ನನ್ನು ಬಿಡದಿರಲಿ, ಅವುಗಳನ್ನು ನಿನ್ನ ಕೊರಳಿಗೆ ಕಟ್ಟು, ನಿನ್ನ ಹೃದಯದ ಹಲಗೆಯಲ್ಲಿ ಅವುಗಳನ್ನು ಬರೆ"** (ಜ್ಞಾನೋ. 3:3). ಹೌದು ಪ್ರಿಯರೇ, ನಾವು ದೇವರ ವಾಕ್ಯವನ್ನು ಓದುವುದರ ಮೂಲಕ, ಪಾರಾಯಣ ಮಾಡುವುದರ ಮೂಲಕ ನಾವು ದೇವರ ವಾಕ್ಯವನ್ನು ಹೃದಯದ ಹಲಗೆಯಲ್ಲಿ ಬರೆಯುವುದಕ್ಕೆ **"ಅವರ ಹೃದಯವು ಕರ್ತನ ಕಡೆಗೆ ತಿರುಗಿಕೊಂಡಾಗಲೇ ಆ ಮುಸುಕು ತೆಗೆಯಲ್ಪಡುವುದು. ಆ ಕರ್ತನು ದೇವರಾತ್ಮನೇ; ಕರ್ತನ ಆತ್ಮನು ಯಾರಲ್ಲಿದ್ದಾನೋ ಅವರಿಗೆ ಬಿಡುಗಡೆ ಉಂಟು. ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕೆನುಸಾರವಾದದ್ದೇ"** (2 ಕೊರಿ. 4:16–18). ನಾವೆಲ್ಲರೂ ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗಬೇಕೆಂಬುದೇ ನನ್ನ ಬಯಕೆ.

ಮುಂದುವರೆಯುವುದು.....

ನಿಮ್ಮೆಲ್ಲರ ಪ್ರೀತಿಗೆ ಪಾತ್ರನಾದ

**ಪಾಸ್ಟರ್ ಜಾನ್ ಸ್ಟೀಫನ್ ಮೊಂತೆರೋ.**

---

## ಪ್ರಾರ್ಥನಾ ಮನವಿಗಳು

- **ನಮ್ಮ ರಾಜ್ಯದಲ್ಲಿ ಸ್ಥಿರವಾದ ಆಡಳಿತ ಜಾರಿಗೆ ಬರುವಂತೆ ಪ್ರಾರ್ಥಿಸೋಣ.**
- **ಪ್ರಾಮಾಣಿಕವಾಗಿ ನಂಬಿಗಸ್ತರಾಗಿ ದೇಶವನ್ನು ಆಳ್ವಿಕೆ ಮಾಡುವ ಅಧಿಕಾರಿಗಳು ಅಧಿಕಾರಕ್ಕೆ ಬರುವಂತೆ ಪ್ರಾರ್ಥಿಸೋಣ.**
- **ಪರೀಕ್ಷೆಯನ್ನು ಬರೆದಿರುವ ಪ್ರತಿಯೊಂದು ಮಕ್ಕಳು ಉತ್ತಮ ದರ್ಜೆಯಲ್ಲಿ ತೇರ್ಗಡೆಯಾಗುವಂತೆ ಕರ್ತನು ಮುಂದೆ ಒಳ್ಳೆಯ ಭವಿಷ್ಯವನ್ನು ಕೊಟ್ಟು ಆಶೀರ್ವದಿಸುವಂತೆ ಪ್ರಾರ್ಥಿಸೋಣ.**
- **ನಮ್ಮ ದೇಶದಲ್ಲಿ ನಡೆಯುತ್ತಿರುವ ಭಯೋತ್ಪಾದನೆ ಭ್ರಷ್ಟಾಚಾರ ವಂಚನೆ ಮೋಸಗಳು ನೀಗಿ ಹೋಗುವುದಕ್ಕಾಗಿ ಪ್ರಾರ್ಥಿಸಿರಿ.**
- **ನಮ್ಮ ದೇಶದಲ್ಲಿ ರಾಜ್ಯದಲ್ಲಿ ಸೇವೆಮಾಡುತ್ತಿರುವ ಪ್ರತಿಯೊಂದು ಸೇವಕರನ್ನು, ಕುಟುಂಬವನ್ನು, ಸಭೆಯನ್ನು ಕರ್ತನು ತನ್ನ ರಕ್ತಕೋಟೆಯೊಳಗೆ ಮರೆಮಾಚಿ ಕಾದ್ದು ಕಾಪಾಡುವಂತೆ ಪ್ರಾರ್ಥಿಸಿರಿ.**
- **ಕ್ರಿಸ್ತನ ಬರೋಣದವರೆಗೂ ರಕ್ಷಣೆಯಲ್ಲಿ, ನಂಬಿಕೆಯಲ್ಲಿ ನೆಲೆಗೊಳ್ಳಲು ಕರ್ತನು ಸಹಾಯಮಾಡುವಂತೆ ಪ್ರಾರ್ಥಿಸಿರಿ.**

---

ನೀವು ನನ್ನ ಹೆಸರಿನಲ್ಲಿ ಏನಾದರೂ ಬೇಡಿಕೊಂಡರೆ ಅದನ್ನು ನೆರವೇರಿಸುವೆನು
(ಯೋಹಾ. 14:14).

## ಸು – ಡೊ – ಕು

ಬುದ್ಧಿಗೆ ಕೆಲಸ ಕೊಡುವ ಸಂಖ್ಯಾ ಒಗಟು ಇದು. ತರ್ಕ ಬಳಸಿ ಈ ಒಗಟನ್ನು ಬಿಡಿಸಬಹುದು. ಎಲ್ಲ ಸಾಲುಗಳಲ್ಲಿ ಮತ್ತು ಕಂಬಗಳಲ್ಲಿ ಒಂದರಿಂದ ಒಂಬತ್ತು ಅಂಕಿಗಳಿರಬೇಕು. ಒಂದರಿಂದ ಒಂಬತ್ತರೊಳಗಿನ ಅಂಕಿಗಳಿರಬೇಕು ಮತ್ತು ಯಾವುದೇ ಅಂಕಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| 8 | 9 | 7 | | 2 | 3 | 4 | 6 | |
| 2 | | 3 | 6 | | 1 | | | |
| | | 4 | | | 9 | | | |
| 5 | | 1 | 8 | | | | | |
| | 8 | | | | | | 7 | |
| | 6 | 5 | | 8 | | | | |
| | | | | | | 6 | | |
| | | | 2 | | 7 | 1 | | 3 |
| | 3 | 6 | 1 | 5 | | 8 | 9 | 2 |

## ನಗೆಹನಿ

ಮೊದಲ ರಾತ್ರಿಯಲ್ಲಿ ಗಂಡ, "ನೀನು ನಗ್ತಾ ಇದ್ರೆ – ತುಂಬಾ ಚೆನ್ನಾಗಿ ಕಾಣಿಸುತ್ತೀಯಾ.. ನಿನ್ನ ಹಲ್ಲುಗಳು ಎಷ್ಟು ಸುಂದರವಾಗಿವೆ...." ಎಂದು ಹೆಂಡತಿಯನ್ನು ಹೊಗಳಿದ. "ಹೌದೇ...!? ಹಾಗಾದ್ರೆ ಆ ಸುಂದರವಾದ ಹಲ್ಲುಗಳನ್ನು ನೀವೇ ಇಟ್ಕೊಳ್ಳಿ" ಎಂದು ಹೇಳಿ, ತನ್ನ ಹಲ್ಲು ಸೆಟ್ಟುಗಳನ್ನು ಕಳಚಿ ಗಂಡನ ಕೈಯಲ್ಲಿಟ್ಟಳು.

## ಅಂಗಿಯಲ್ಲಿ ಕಲೆಯಾಗಿ ಕಳೆಗುಂದಿದೆಯೆ?

ವಿವಿಧ ಬಟ್ಟೆಗಳಿಗೆ ಬಗೆಬಗೆಯ ವಸ್ತು, ಎಣ್ಣೆ, ತೈಲ ಇತ್ಯಾದಿಗಳಿಂದ ಕಲೆಗಳಾಗುವುದು ಸಹಜ. ಬಗೆಬಗೆಯ ವಸ್ತುಗಳ ಕಲೆಗಳಿಗೆ ವಿವಿಧ ರೀತಿಯ ಕಲೆನಿವಾರಗಳಿವೆ.

**ಎಣ್ಣೆಯ ಕಲೆಗಳ ನಿವಾರಣೆಗೆ:** ಎಣ್ಣೆ ತುಪ್ಪ ಮುಂತಾದವುಗಳು ಬಟ್ಟೆಯ ಮೇಲೆ ಬಿದ್ದು ಕಲೆ ಉಂಟಾದರೆ ಮೊದಲು ಚಾಕ್‌ಪೀಸ್‌ನ ಹುಡಿಯಿಂದ ತಿಕ್ಕಬೇಕು. ಬಳಿಕ ಬಿಸಿನೀರಿನಲ್ಲಿ ಸೋಪ್ ಹುಡಿ ಹಾಕಿಟ್ಟು ಅದರಲ್ಲಿ ನೆನೆಸಿಡಬೇಕು. ಬಳಿಕ ತಿಕ್ಕಿ ತೊಳೆದರೆ ಎಣ್ಣೆಯ ಕಲೆಗಳು ನಿವಾರಣೆಯಾಗುತ್ತವೆ.

**ಡಾಂಬರಿನ ಕಲೆ ನಿವಾರಣೆಗೆ:** ಡಾಂಬರ್ ಕಲೆಯ ಮೇಲೆ ನಾಲ್ಕಾರು ಹನಿ ನೀಲಗಿರಿ ತೈಲ ಹಾಕಿ ಬಲ ಹಾಕಿ ತಿಕ್ಕಬೇಕು. ಬಳಿಕ ಬಿಸಿನೀರು ಮತ್ತು ಸೋಪ್ ಬಳಸಿ ತಿಕ್ಕಿದರೆ ಡಾಂಬರಿನ ಕಲೆ ನಿವಾರಣೆಯಾಗುತ್ತದೆ.

**ತುಕ್ಕು ಹಿಡಿದ ಕಬ್ಬಿಣದ ಪಾತ್ರೆಯ ಕಲೆ ನಿವಾರಣೆಗೆ:** ಬಟ್ಟೆಯ ಮೇಲೆ ತುಕ್ಕು ಹಿಡಿದ ಕಬ್ಬಿಣದಿಂದ ಕಲೆ ಉಂಟಾದಾಗ ಮೊದಲು ನಿಂಬೆರಸ ಹಾಗೂ ಉಪ್ಪಿನ ಮಿಶ್ರಣವನ್ನು ಆ ಭಾಗಕ್ಕೆ ಹಚ್ಚಿ ತಿಕ್ಕಬೇಕು. ಬಳಿಕ ಬಿಸಿನೀರಿನ ಸೋಪಿನ ದ್ರಾವಣದಿಂದ ತಿಕ್ಕಿ ತೊಳೆಯಬೇಕು.

**ರಕ್ತಬಿದ್ದ ಕಲೆ ನಿವಾರಣೆಗಾಗಿ:** ಬಟ್ಟೆಯ ಮೇಲೆ ರಕ್ತದ ಹನಿ ಬಿದ್ದ ತಕ್ಷಣ ಉಪ್ಪು ನೀರಿನಿಂದ ತಿಕ್ಕಿ ತೊಳೆದರೆ ಹಾಗೂ ಬಳಿಕ ಸೋಪ್ ನೀರಲ್ಲಿ ಅದ್ದಿ ಇಟ್ಟು ತೊಳೆದರೆ ಕಲೆ ನಿವಾರಣೆಯಾಗುತ್ತದೆ. ಬಿಸಿನೀರಿನಿಂದ ಮಾತ್ರ ರಕ್ತದ ಕಲೆಗಳನ್ನು ತೊಳೆಯಕೂಡದು. ಅದು ಕಲೆಯನ್ನು ಗಾಢವಾಗಿಸುತ್ತದೆ.

**ತಾಂಬೂಲದ ಕಲೆ:** ತಾಂಬೂಲದ ರಸ ಬಿದ್ದು ಬಟ್ಟೆಯ ಮೇಲೆ ಕಲೆ ಉಂಟಾದಾಗ ಸೀಬೆಕಾಯಿಯ ರಸದಿಂದ ತಿಕ್ಕಬೇಕು. ಇದರಿಂದ ತಾಂಬೂಲದ ಕಲೆ ನಿವಾರಣೆಯಾಗುತ್ತದೆ.

**ನೈಲ್‌ಪಾಲಿಷ್‌ನ ಕಲೆ:** ಬಟ್ಟೆಗೆ ನೈಲ್‌ಪಾಲಿಷ್ ತಗುಲಿ ಕಲೆಯಾದರೆ ತಕ್ಷಣ ಸ್ಪಿರಿಟ್‌ನಲ್ಲಿ ಅದ್ದಿದ ಹತ್ತಿಯಿಂದ ತಿಕ್ಕಿ ಬಳಿಕ ಸೋಪಿನ ದ್ರಾವಣದಿಂದ ತಿಕ್ಕಿ ತೊಳೆದರೆ ಕಲೆ ನಿವಾರಣೆಯಾಗುತ್ತದೆ.

– ಸಂಗ್ರಹ.

ಬಲಾಧಿಕ್ಯವು ದೇವರದೇ ಹೊರತು ನಮ್ಮೊಳಗಿಂದ ಬಂದದ್ದಲ್ಲವೆಂದು ತೋರುವದಕ್ಕಾಗಿ
ಈ ನಿಕ್ಷೇಪವು ಮಣ್ಣಿನ ಘಟಗಳಲ್ಲಿ ನಮಗುಂಟು (2ಕೊರಿಂ 4:17).

# ಪ್ರೇಮವೋ? ಕಾಮವೋ? ಮೋಹವೋ?

ಯೌವ್ವನವು ಚಿಗುರುತ್ತಿದ್ದಂತೆ ಹಾಗೂ ತಾರುಣ್ಯವು ಅರಳುತ್ತಿರುವಂತೆ ಯೌವ್ವನಸ್ಥ(ಸ್ಥೆ)ಯ ಹೃದಯವು ಕೂಡ ಸುಂದರ ಕಲ್ಪನೆಗಳಿಂದ ಅರಳಲು ಪ್ರಾರಂಬಿಸುತ್ತದೆ. ನನ್ನ ಪ್ರಿಯ ಸಹೋದರ(ರಿ)ಯರೇ 'ಆ ವಿಷ ಕೊಂಬುಗಳ ವಿಚಾರವಾಗಿ ಎಚ್ಚರದಿಂದಿರಿ' ಯಾಕೆಂದರೆ ಅವು ಬಹಳ ತಡವಾಗಿ, ನಿಮಗೆ ಎಚ್ಚರಿಸುವದಕ್ಕಲ್ಲ, ಆದರೆ ನಿಮಗೆ ಗಂಡಾಂತರವನ್ನುಂಟು ಮಾಡಲಿಕ್ಕಾಗಿ ನಿಮಗೆ ಚುಚ್ಚುವಂತವುಗಳಾಗಿವೆ. ಅಡಗಿರುವ ಮೋಹ ಪಾಶಗಳು ಅರಿವು ಇಲ್ಲದೆ ನೀವು ಇದೀಗ ಗೂಡಿನಿಂದ ಹೊರಗೆ ಬಂದು ಆಕರ್ಷಕವಾದ ಈ ಲೋಕದಲ್ಲಿ ಹಾರಾಡುತ್ತಿದ್ದೀರಿ. ಈ ಲೋಕವು ಜನರನ್ನು ಅನೇಕ ಕಾರ್ಯಗಳನ್ನು ಎದುರು ನೀಡಿ ನಮ್ಮ ಸ್ವಭಾವೇಶಗಳನ್ನು ಈಡೇರಿಸುವಂತೆ ಆಮಂತ್ರಿಸುತ್ತದೆ. ಆದ್ದರಿಂದ ನಾವು ಬಹಳ ಜಾಗ್ರತೆಯಿಂದ ಈ ಲೋಕದಲ್ಲಿ ಜೀವಿಸುವವರಾಗಿರಬೇಕು. **"ಯೌವ್ವನಸ್ಥನೆಂದು ನಿನ್ನನ್ನು ಅಸಡ್ಡೆಮಾಡುವದಕ್ಕೆ ಯಾರಿಗೂ ಅವಕಾಶಕೊಡದೆ ನಂಬುವವರಿಗೆ ನಡೆ ನುಡಿ ಪ್ರೀತಿ ನಂಬಿಕೆ ಶುದ್ಧತ್ವ ಇವುಗಳ ವಿಷಯದಲ್ಲಿ ನೀನೇ ಮಾದರಿಯಾಗಿರು"** (ತಿಮೋ. 4:12).

ಈಗ ನನ್ನ ವಿಷಯ ಏನೆಂದರೆ ಅನೇಕ ಯೌವ್ವನಸ್ಥ(ಸ್ಥೆ) ಕಾಮವನ್ನು ತಪ್ಪಾಗಿ ಪ್ರೀತಿಯೆಂದು ಪರಿಗಣಿಸಿ ತಮ್ಮ ಪಶುಸ್ವಭಾವದಿಂದ ಬಲೆಯಲ್ಲಿ ಬಿದ್ದು ಹೋಗುತ್ತಿದ್ದಾರೆ. ಇದರಿಂದಾಗಿ ತಮ್ಮ ಕನ್ಯಾವಸ್ಥೆಯನ್ನು ಮರೆತು; ಮರೆಯಲಶಕ್ಯವಾದ ನೋವುವನ್ನುಂಟು ಮಾಡುವ ನೆನಪು ಹೃದಯಗಳಲ್ಲಿ ಮೂಡಿಸಲ್ಪಟ್ಟಿದೆ. ಯೌವನಸ್ಥನೇ(ಳೇ) ಯೌವ್ವನಸ್ಥನು ತನ್ನ ನಡತೆಯನ್ನು ಶುದ್ಧಪಡಿಸಿಕೊಳ್ಳುವದು ಯಾವದರಿಂದ? ನಿನ್ನ ವಾಕ್ಯವನ್ನು ಗಮನಿಸಿ ನಡೆಯುವದರಿಂದಲೇ; (ಕೀರ್ತ. 119:9) ರ ಪ್ರಕಾರ ಇದರಿಂದ ಸಂರಕ್ಷಿಸಿಕೊಳ್ಳಲು ದಾರಿಯಾಗಿದೆ. ಆದ್ದರಿಂದ ಸತ್ಯವೇದದ ಅನುಸಾರವಾದ ಒಂದು ಘಟನೆಯನ್ನು 2ಸಮುವೇಲ 13 ಅಧ್ಯಾಯದಲ್ಲಿ ಕಾಣುತ್ತೇವೆ. ಈ ಅಧ್ಯಾಯವನ್ನು ನೀವು ಗಂಭೀರವಾಗಿ ಓದಿದ ಮೇಲೆ, ಈ ಬರಹವನ್ನು ಓದಿರಿ.

ಇಲ್ಲಿ ನೋಡುವಾಗ ತಾಮಾರಳು ಒಬ್ಬಳು ಸುಂದರ ಯುವತಿಯಾಗಿದ್ದಳು. ಆಕೆಗಿರುವ ಸಹೋದರನಾದ ಅಮ್ನೋನನು ಆಕೆಯ ಮೇಲೆ ಮೋಹಗೊಂಡನು, ಅಮ್ನೋನನು ಒಳ್ಳೆಯವನಾಗಿದ್ದನಲ್ಲದೆ ತಾಮಾರಳು ಇನ್ನು ಕನ್ಯೆಯಾದ್ದರಿಂದ ಆಕೆಗೆ ಕೇಡುಮಾಡಬಾರದೆಂದಿದ್ದನು. ಆದರೆ ಆಕೆಯ ಮೇಲೆ ಮೋಹದ ನಿಮಿತ್ತ ಬಳಲುತ್ತಿದ್ದನು. ಅಮ್ನೋನನಿಗೆ ಒಬ್ಬ ತಕ್ಕ ಗೆಳೆಯನು ಇದ್ದನು. ಅವನೇ ದಾವೀದನ ಅಣ್ಣನ ಮಗನಾದ ಶಿಮ್ಮನ ಮಗನಾದ ಯೋನಾದಾಬನು ಆತನು ಅಮ್ನೋನನನ್ನು ಗಮನಿಸುತ್ತಾ ಆತನ ಶರೀರದ ಕ್ಷೀಣತೆಯ ನಿಜಸಂಗತಿಯನ್ನು ಹೊರತೆಗೆಯ ಬೇಕೆಂದಿದ್ದನು, ಮೂರ್ಖತನದಿಂದ ತನ್ನ ಗೆಳೆಯನ ಮೇಲೆ ಭರವಸವಿಟ್ಟು ತಾಮಾರಳ ಮೇಲಿದ್ದ ತನ್ನ ಪ್ರೀತಿಯ ವಿಷಯ ತಿಳಿಸಿದನು. ಒಂದು ಗಂಭೀರವಾದ ವಿಷಯ ನಿಮ್ಮ ಮುಂದೆ ಬರೆಯಲು ಇಷ್ಟವುಳ್ಳವನಾಗಿದ್ದೇನೆ. ಈ ಲೋಕದಲ್ಲಿ ಯೌವ್ವನಸ್ಥ(ಸ್ಥೆ)ರಾಗಿರುವಾಗ ನಾವು ಬಹಳ ಎಚ್ಚರವಹಿಸಬೇಕಾದ ಸಂಗತಿ ಏನೆಂದರೆ, ನಮ್ಮ ಗೆಳೆಯ /ಗೆಳತಿಯ ವಿಷಯದಲ್ಲಿ ಯಾಕೆಂದರೆ ಅವರು ಅವಿಶ್ವಾಸಿ ಆಗಿರುವುದಾದರೆ ಅವರ ಹಿನ್ನಲೆ ತಿಳಿದು ಗೆಳೆತನ ಮಾಡಿಕೊಳ್ಳಬೇಕು. ವಿಶ್ವಾಸಿ ಆಗಿರುವುದಾದರೆ ಅವರ ಆತ್ಮೀಕತೆ ಸ್ವಭಾವ, ಸಾಕ್ಷಿಜೀವಿತ ತಿಳಿದು ಹೆಚ್ಚು ಗೆಳೆತನ ಮಾಡಿಕೊಳ್ಳಬೇಕು. ವಿಶ್ವಾಸಿಯು ವಿಶ್ವಾಸಿಯವರೊಂದಿಗೆ ಗೆಳೆತನ ಮಾಡಿಕೊಳ್ಳಬೇಕು. ಯಾಕೆಂದರೆ ಇದರಿಂದ ನಿಮ್ಮ ಆತ್ಮಕ್ಕೆ ದಕ್ಕೆ ಬರದ ರೀತಿಯಲ್ಲಿ ಸ್ನೇಹ ಬೆಳೆಸಿಕೊಳ್ಳರಿ ಎಂದರ್ಥ. ನಿದ್ರೆ ಮಾಡುವವನೇ, ಎಚ್ಚರವಾಗು; ಸತ್ತವರನ್ನು ಬಿಟ್ಟು ಏಳು; ಕ್ರಿಸ್ತನು ನಿನಗೆ ಪ್ರಕಾಶ ಕೊಡುವನು (ಎಫೆ. 5:15,16) ಈ ವಾಕ್ಯದ ಪ್ರಕಾರ ತಿಳಿದು ಈ ಲೋಕದಲ್ಲಿ ಜೀವಿಸೋಣ. ಅಮ್ನೋನನಿಗೆ ಅಡಕವಾದ ಮೋಹದ ನಿಮಿತ್ತ ತನ್ನ ಜೀವಿತ ನಷ್ಟ ಪಡಿಸಿಕೊಂಡನು ಮಾತ್ರವಲ್ಲ ಕುಟುಂಬದಲ್ಲಿ ತಾತ್ಸಾರ ಮನೋಭಾವ ಹೊಂದಿಕೊಂಡನು. ಆದ್ದರಿಂದ ಪೌಲನು ಯೌವ್ವನಸ್ಥನಾದ ತಿಮೋಥೆಯನಿಗೆ 'ನಿನ್ನ ಯೌವ್ವನದ ಇಚ್ಚೆಗಳಿಗೆ ದೂರವಾಗಿರು' ಇದು ನನ್ನನ್ನು ನಿನ್ನನ್ನು ಎಚ್ಚರಿಸುವಂತದ್ದಾಗಿದೆ.

ನೋಡಿರಿ, ಈಗಾಗಲೇ ಕಾಲೇಜು ಓದುತ್ತಾ ಇರಬಹುದು, ಕೆಲಸಮಾಡುತ್ತಿರಬಹುದು ಮಾತ್ರವಲ್ಲ ಕ್ರಿಸ್ತನ ಸೇವಕ(ಕಿ)ರಾಗಿರಬಹುದು. ನಿಮಗೆ ಆಲೋಚನೆ ಕೊಡುವುದೇನೆಂದರೆ ಯೋನಾಬಾನಾ ಹಾಗೆ ನಿಮಗೆ ತಪ್ಪಾದ ಸಲಹೆ ಕೊಟ್ಟು ನಿಮ್ಮನ್ನು ಅಡ್ಡದಾರಿಗೆ ನಡೆಸುತ್ತಾರೆ, ಅಮ್ನೋನನು ತಪ್ಪಾಗಿ ನೀಚ ಸಲಹೆಯನ್ನು ಹಿಂಬಾಲಿಸಿದರ ನಿಮಿತ್ತ ತನ್ನ ಯೌವ್ವನದ ಜೀವಿತವನ್ನು ನಷ್ಟಪಡಿಸಿಕೊಂಡನು. ಆದಕಾರಣ ನನ್ನ ಪ್ರಿಯ ಯೌವ್ವನಸ್ಥ ಸ್ತ್ರೀ ಪುರುಷರೇ ದೇವರ ಭಯವೇ ಜ್ಞಾನಕ್ಕೆ ಮೂಲ ಎಂಬ ವಾಕ್ಯದ ಪ್ರಕಾರ ಯಾವ ತಪ್ಪಾದ ಸಲಹೆಗೆ ಕಿವಿ ಕೊಡದೆ ದೇವರ ಸ್ವರಕ್ಕೆ ಕಿವಿಕೊಟ್ಟು ನಿಮ್ಮ ಜೀವಿತವನ್ನು ಕ್ರಿಸ್ತನಿಗಾಗಿ ಸಾಕ್ಷಿ ಹೊಂದಿದವರಾಗಿ ಜೀವಿಸಿರಿ.

ಮುಂದುವರಿಯುತ್ತದೆ......

ಕರ್ತನು ನಿಮ್ಮನ್ನು ಹೇರಳವಾಗಿ ಆಶೀರ್ವದಿಸಲಿ, ಆಮೆನ್.

ಆತನು ತನ್ನ ಪ್ರಜೆಗೋಸ್ಕರ (ಘನದ) ಕೊಂಬನ್ನು ಎಬ್ಬಿಸಿದ್ದಾನೆ
(148:14).

# ಆಳವಾದ ಸ್ಥಳಕ್ಕೆ

(ಲೂಕ. 5:1–11)

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ಹೃತ್ಪೂರ್ವಕವಾದ ವಂದನೆಗಳು.

ಕಳೆದ ರಾತ್ರಿ ಎಂಬುದು ಪೇತ್ರನ ನಷ್ಟಗಳನ್ನು ಅನುಭವಿಸಿದ ಪರಾಜಯದ ದಿನಗಳಾಗಿತ್ತು. ಹೇಗೆ ಹೊರಟನೋ ಹಾಗೆಯೇ ಹಿಂದಕ್ಕೆ ಬಂದ ಕೆಲವು ಶೂನ್ಯತೆಯ ಅನುಭವಗಳಾಗಿತ್ತು. ಈ ಪೇತ್ರನದು ಒಂದು ಬರಿದಾದ ಅವಸ್ಥೆ ಈತನ ಅನುಭವವು ಕಾರ್ಯತಂತ್ರವು, ಪ್ರಯಾಸವು ಯಾವುದು ಕೂಡಾ ತನ್ನ ದೋಣಿಯನ್ನು ತುಂಬಿಸಲಿಕ್ಕೆ ಸಾಧ್ಯವಾಗಲಿಲ್ಲ ಒಂದು ಉನ್ನತಿಯನ್ನು ತನ್ನ ಕಾರ್ಯವನ್ನು ಸಫಲತೆಯನ್ನು ಕಾಣಲಾಗದಂತ ಒಂದು ನಿರಾಶೆಯ ಜೀವಿತವಾಗಿತ್ತು ಒಂದಲ್ಲ ಎರಡಲ್ಲ ಅನೇಕ ದಿನಗಳು ಬರಿದಾಗಿ ಬಂದ ಅನುಭವ Thank God ಆದರೆ ಕರ್ತನಾದ ಯೇಸುಕ್ರಿಸ್ತನು ಆ ಕೆರೆಯ ದಡದಲ್ಲಿರುವ 2 ದೋಣಿಯನ್ನು ಕಂಡರು.

ಪ್ರಿಯರೇ, ಕಳೆದ ಭಾರಿ ನೀವು ವ್ಯಾಪಾರಗಳಲ್ಲಿ ನಷ್ಟಗಳನ್ನು ನಾನಾ ತರವಾದ ಕಷ್ಟಗಳಿಗೆ ಒಳಗಾಗಿ ಶೂನ್ಯತೆಯನ್ನು ಅನುಭವಿಸಿದ ಪರಾಜಯದ ದಿನಗಳು ನಿಮ್ಮ ಮುಂದೆ ಇಲ್ಲವೋ? ಆದರೆ ನಿಮ್ಮ ಬರಿದಾದ ಅವಸ್ಥೆಯನ್ನು ನೋಡಿದ ಪರಲೋಕವಿದೇ ಪ್ರಿಯರೇ, ಇವತ್ತು ಭಾರ ಪಡುವ ಅಗತ್ಯವಿಲ್ಲ ಅಂದು ಅಬ್ರಹಾಮ ಸಾರಳ, ಹಾಗರಳ, ಹನ್ನಳ ಶೂನ್ಯತೆಗೆ ಉತ್ತರಿಸಿದ ದೇವರು ಇಂದೂ ಕೂಡಾ ತನ್ನ ಬಳಿಗೆ ಬರುವವರಿಗೆ ಕರ್ತನು ಉತ್ತರಿಸಲು ನಂಬಿಗಸ್ತನಾಗಿದ್ದಾನೆ. ಇಬ್ರಿ. 13:8 ರಲ್ಲಿ ಹೇಳುವ ಪ್ರಕಾರ ಯೇಸುಕ್ರಿಸ್ತನು **ನಿನ್ನೆ ಇದ್ದ ಹಾಗೆ ಈ ಹೊತ್ತು ಇದ್ದಾನೆ ನಿರಂತರವೂ ಹಾಗೆಯೇ ಇರುವನು.** ದೇವರಿಗೆ ಸ್ತೋತ್ರ ಮಲಾ. 3:6 ರಲ್ಲಿ ಆದರೂ ಯೆಹೋವನಾದ ನಾನು ಮಾರ್ಪಟ್ಟಿಲ್ಲ; ಆದದರಿಂದ ಯಾಕೋಬ ಸಂತತಿಯವರೇ ನೀವು ನಾಶವಾಗಲಿಲ್ಲ. ಇವತ್ತು ನಾವು ದೇವರಿಗೆ ಸ್ತೋತ್ರ ಮಾಡಬೇಕಾಗಿದೆ, ಕರ್ತನು ತಾನೇ ಕರ್ತನಾಗಿದ್ದಾನೆ. ಆತನು ಎಲ್ಲಾವನ್ನು ಕ್ಲುಪ್ತ ಸಮಯದಲ್ಲಿ ಮಾಡಿಮುಗಿಸುತ್ತಾನೆ. ಇವತ್ತು ನಾವು ನಮ್ಮ ವೃತ್ತದಿಂದ ಹೊರ ಬರಬೇಕಾಗಿದೆ. ಪೇತ್ರನು ತನ್ನ ದೋಣಿಯಲ್ಲಿ ಯೇಸುವಿಗೆ ಸ್ಥಳಕೊಟ್ಟಾಗ ಮತ್ತು ಕರ್ತನ ಮಾತಿನಂತೆ ದೋಣಿಯನ್ನು ಆಳವಾದ ಸ್ಥಳಕ್ಕೆ ನಡೆಸಿ ಬಲೆಯನ್ನು ಹಾಕಿದಾಗ ಬಲೆ ಹರಿದು ಹೋಗುವಷ್ಟರ ಮಟ್ಟಿಗೆ ಮೀನುಗಳು ರಾಶಿರಾಶಿಯಾಗಿ ತುಂಬಿದವು ಇಲ್ಲಿ ಪೇತ್ರನ ದೋಣಿ ತುಂಬಲ್ಪಟ್ಟದ್ದು ಮಾತ್ರವಲ್ಲ ಅವನೊಂದಿಗೆ ಬಂದ ಸಹ ಪಾಲುಗಾರರ ದೋಣಿಯು ತುಂಬಲ್ಪಟ್ಟಿತ್ತು.

ದೇವರು ನಮ್ಮ ಆಶೀರ್ವಾದವನ್ನು ತನ್ನ ಮಾತಿನೊಳಗೆ ಅಡಕವಾಗಿಟ್ಟಿದ್ದಾನೆ. ನೀವು ಕರ್ತನ ಮಾತಿಗೆ ವಿಧೇಯರಾಗುವುದಕ್ಕೆ ಸಿದ್ಧವಾಗುವುದಾದರೆ ಪರಲೋಕವು ನಿಮ್ಮೊಂದಿಗೆ ನಿಲ್ಲಲು ಶಕ್ತವಾಗಿದೆ. ದೇವರು ನಿಮ್ಮಲ್ಲಿ ಎದುರು ನೋಡುವ ಕೆಲವೊಂದು ತ್ಯಜಿಸುವಿಕೆ, ವಿಧೇಯತೆ, ತ್ಯಾಗಗಳು ಪ್ರಕಟವಾಗಿ ಬರುವಾಗ ನಮ್ಮ ದೋಣಿಗಳು ತುಂಬಲ್ಪಡುತ್ತದೆ. ನಾವು ಸೇವಿಸುವ ದೇವರು ಬತ್ತಿದ ಭೂಮಿಯಲ್ಲಿ ಮಳೆಗರೆದು ಒಣನೆಲದಲ್ಲಿ ಕಾಲುವೆಗಳನ್ನು ಹರಿಸುವೆನು ನಿನ್ನ ಸಂತಾನದವರಲ್ಲಿ ನನ್ನ ಆತ್ಮವನ್ನು ನಿನ್ನ ಸಂತತಿಯವರ ಮೇಲೆ ನನ್ನ ಆಶೀರ್ವಾದವನ್ನು ಸುರಿಸುವೆನು. ನೀರಿನ ಕಾಲಿವೆಗಳ ಬಳಿಯಲ್ಲಿ ಹಸುರು ಹುಲ್ಲಿನ ನಡುವೆ ಬೆಳೆಯುವ ನೀರವಂಜಿಗಳಂತೆ ವೃದ್ಧಿಯಾಗುವರು (ಯೆಶಾ. 44:3,4).

ಹೌದು ಪ್ರಿಯರೇ, ನಿಮ್ಮ ದೋಣಿಯಲ್ಲಿ ಕರ್ತನಾದ ಯೇಸುವಿಗೆ ಸ್ಥಳಕೊಡುವುದಾದರೆ ಮತ್ತು ಆತನ ನಡಿಸುವಿಕೆಗೆ ಬಿಟ್ಟು ಕೊಡುವುದಾದರೆ, ಅಂದರೆ ನಿಮ್ಮಲ್ಲಿರುವ ಎಲ್ಲಾ ಬೀಗದ ಕೈಯನ್ನು ದೇವರಿಗೆ ಒಪ್ಪಿಸುವುದಾದರೆ ಕರ್ತನ ಮಹಿಮೆಯನ್ನು ಕಾಣಲು ಸಾಧ್ಯ. **"ನಿನ್ನ ಕಾರ್ಯಭಾರವನ್ನು ಯೆಹೋವನಿಗೆ ವಹಿಸಿದರೆ ನಿನ್ನ ಉದ್ದೇಶಗಳು ಸಫಲವಾಗುವವು"** (ಜ್ಞಾನೋ. 16:3).

ನಮಗೆ ದಡದ ಅನುಭವ ಬಿಡಲಿಕ್ಕೆ ಮನಸ್ಸಿರಬೇಕು. ದಡದಲ್ಲಿ ನಿಂತು ಬಲೆ ಬೀಸುವುದು ಸಾಕು ಇದು ಕೊಕ್ಕರೆಯ ಸ್ವಭಾವ ಇದು ಸೋಮಾರಿತನಕ್ಕೆ ಮತ್ತು ಜಡಭಾವಕ್ಕೆ ನಡೆಸುತ್ತದೆ. ನಿಮ್ಮ ಕರ್ತನೊಂದಿಗೆ ಕಳೆಯುವಂಥ 5 ನಿಮಿಷ 10 ನಿಮಿಷ ಈ ಒಂದು ಪರಿಸಾಯ ಪ್ರಾರ್ಥನೆಯಿಂದ ಹೊರಬರ ಬೇಕು.ಇದು ನಮ್ಮನ್ನು ಆತ್ಮೀಕವಾಗಿ ರೋಗಗ್ರಸ್ಥರನ್ನಾಗಿ ಮಾಡುತ್ತದೆ ಅದಕ್ಕೆ More Prayer More Power Less

ಯೆಹೋವನು ಒಬ್ಬನ ನಡತೆಗೆ ಮೆಚ್ಚಿದರೆ ಅವನ ಶತ್ರುಗಳನ್ನೂ ಮಿತ್ರರನ್ನಾಗಿ ಮಾಡುವನು (ಜ್ಞಾನೋ. 16–7).

Prayer Less Power No Prayer No Power ಇವತ್ತು ದೇವರು ನಿಮಗೆ ದಡದ ಅನುಭವ ಬಿಟ್ಟು ಆಳವಾದ ಅನುಭವಕ್ಕೆ ಬರಬೇಕೆಂದು ಹೇಳುತ್ತಿದ್ದಾನೆ. ಇದು ಕರ್ತನೊಂದಿಗೆ ಅಧಿಕವಾಗಿ ಕಳೆಯುವಂಥ ಆಳವಾದ ಸಂಬಂಧಕ್ಕೆ ನಡೆಸುತ್ತದೆ. ಹೀಗೆ ನಾವು ಕರ್ತನಾದ ಯೇಸುವಿನೊಂದಿಗೆ ಆಳವಾಗಿ ಬೇರೂರುವಾಗ ನೀವು ನನ್ನಲ್ಲಿಯೂ ನನ್ನ ವಾಕ್ಯ ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವದು. ನೀವು ಬಹಳ ಫಲಕೊಡುವದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವದು; ಮತ್ತು ನನ್ನ ಶಿಷ್ಯರಾಗುವಿರಿ" (ಯೋಹಾ. 1 5:7–8).

ಹೌದು ಆಳವಾಗಿ ಇಳಿಯುವಾಗಲೇ ನಿಧಿ ನಿಕ್ಷೇಪವನ್ನು, ಬಚ್ಚಿಟ್ಟ ಮನ್ನವನ್ನು ಹೊಂದಿಕೊಳ್ಳಲಿಕ್ಕೆ ಸಾಧ್ಯ ಮತ್ತು ನಮ್ಮ ದೋಣಿಯು ಹಾಗೂ ನಮ್ಮನ್ನು ಹಿಂಬಾಲಿಸಿ ಬರುವ ದೋಣಿಯು ಕೂಡಾ ತುಂಬಲ್ಪಡುತ್ತದೆ. **"ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದ ವುಂಟಾಗುವದು ಎಂದು ಹೇಳಿದನು"** (ಆದಿ. 12:3).

ದೈವ ಸಭೆಯೇ ತುಂಬಿ ತುಳುಕುವುದನ್ನು ಕಾಣಬೇಕೋ? ದಡವನ್ನು ಮರೆತು ಬಿಡು ಹಳೆಯ ಸೋಲು, ಕಹಿ, ಇಕ್ಕಟ್ಟು ಮರೆತುಬಿಡು (ಯೆಶಾ. 43:18–21). ಕರ್ತನಾದ ಯೇಸು ಕ್ರಿಸ್ತನ ನಡಿಸುವಿಕೆಯ ಆಳಕ್ಕೆ ಇಳಿದು ಬಲೆಯನ್ನು ಬೀಸುವಾಗ (ಯೆಶಾ. 60:3–7)ರ ವಾಕ್ಯದ ಪ್ರಕಾರ ಜನಾಂಗಗಳು ನಿನ್ನ ಬೆಳಕಿಗೆ ನೆರೆಯುವವು ಅರಸರು ನಿನ್ನ ಉದಯ ಪ್ರಕಾಶಕ್ಕೆ ಬರುತ್ತಾರೆ ದೇವರು ಕಳುಹಿಸುವವರು ನಿನ್ನ ಬಳಿಗೆ ಬರುತ್ತಾರೆ. ನೀನು ನೋಡಿ ಕಳೆಗೊಳ್ಳುವಿ ಅಂದು ದೇವರ ಮಹಿಮೆಯ ಮುಂದೆ ಪೇತ್ರನು ಅಡ್ಡ ಬೀಳುವುದಕ್ಕೆ ಸಹ ಪಾಲುಗಾರರಾಗಿ ಬಂದಂಥ ಯಾಕೋಬ ಯೋಹಾನ ವಿಸ್ಮಯ ಪಡುವುದಕ್ಕೆ ಕಾರಣವಾಯಿತು ಅಂದು ಶಾಸ್ತ್ರಭ್ಯಾಸ ಮತ್ತು ವಿಧ್ಯಾರ್ಹತೆ ಇಲ್ಲದ ಪೇತ್ರನು ವ್ಯತ್ಯಾಸವಾಗಿ ಬದಲಾಗುವುದಕ್ಕೆ ಎಡೆಯಾಯಿತು. ಲೌಕಿಕನಾದ ವ್ಯಕ್ತಿ ಅಲೌಕಿಕವಾದ ಶಕ್ತಿಯಿಂದ ತುಂಬಲ್ಪಟ್ಟವನಾಗಿ ಒಳ್ಳೆ ಜಾತಿಯ ದೊಡ್ಡ ಮೀನುಗಳನ್ನು ಹಿಡಿಯುವ ಉನ್ನತವಾದ ಅಭಿಷೇಕವನ್ನು ಹೊಂದಿಕೊಂಡನು. ದೇವರ ಅಧೀನದಲ್ಲಿದ್ದ ಬಲವಾದ ಸಂದೇಶ ಕೊಟ್ಟಾಗ ಅಂದು ಯೇಸುವನ್ನು ತಳ್ಳಿದ 3,000 ಯೆಹೂದ್ಯರು ರಕ್ಷಣೆ ಹೊಂದುವುದಕ್ಕೆ ಎಡೆಯಾಯಿತು. ಅಂದು ಯೆಹೂದ್ಯ ಲೋಕಕ್ಕೆ ಆಶ್ಚರ್ಯವಾಯಿತು. ನಂತರವಾಗಿ ಪೇತ್ರನ ನೆರಳು ಬಿದ್ದಾಗ ರೋಗಿಗಳನ್ನು ದುರಾತ್ಮಪೀಡಿತರು ಬಿಡುಗಡೆಗೊಳ್ಳುವುದಕ್ಕೆ ಮುಂದುವರಿದು 5000ಕ್ಕೂ ಮೇಲ್ಪಟ್ಟು ರಕ್ಷಿಸಲ್ಪಡುವುದಕ್ಕೆ ಕಾರಣವಾಯಿತು. ಎಲ್ಲಾ ಆಶೀರ್ವಾದಗಳು ಸಭೆಯೊಳಗೆ ಬರುವುದಕ್ಕೆ ಪ್ರಾರಂಭವಾಯಿತು. ಸಮುದ್ರ ವ್ಯಾಪಾರ ಸಮೃದ್ಧಿಯು ಸಭೆಯ ಕಡೆಗೆ ತಿರುಗುವುದಕ್ಕೆ ಜನಾಂಗಗಳ ಐಶ್ವರ್ಯವು, ನಾನಾ ತಲಾಂತುಗಳುಳ್ಳ ಜನಗಳು ವಿವಿಧ ರಾಷ್ಟ್ರಗಳಿಂದ ಬಂದು ಸೇರುವುದಕ್ಕೂ ಮತ್ತು ಕರ್ತನ ಆಲಯ ಸುಂದರ ಆಲಯವಾಗಿ ಅಲಂಕೃತವಾಗುತ್ತದೆ. ಸಭೆಯು ಮಾಹಿಮಾಭರಿತವಾಗುತ್ತದೆ. ಹೀಗೆ **"ಬಲವನ್ನು ತೇಜಸ್ಸನ್ನು ಹೊದ್ದು ಕೊಂಡಿರುವಳು ಭವಿಷ್ಯತ್ತಿನ ಭಯವಿಲ್ಲದೆ ನಗುತ್ತಿರುವಳು"** (ಜ್ಞಾನೋ. 31:25).

ಪ್ರಿಯ ದೈವ ಸಭೆಯೇ ಕರ್ತನೊಂದಿಗೆ ಆಳವಾಗಿ ಇಳಿದು ಬಾ. ನನ್ನ ಕರ್ತನಾದ ಯೇಸುಕ್ರಿಸ್ತನು ತುಂಬಿಸಲು ಶಕ್ತನಾಗಿದ್ದಾನೆ.

ಕರ್ತನು ತಾನೇ ಚಿಯೋನಿನಿಂದ ಹೇರಳವಾಗಿ ನಿಮ್ಮನ್ನು ಆಶೀರ್ವದಿಸಲಿ.

## ಡಿಜಿಎಮ್ ಬೇತೇಲ್ ಅಂಕಣ

- **ಎಲ್ಲರಿಂದ ತಳ್ಳಲ್ಪಟ್ಟು ಮಾನಸಿಕ ಅಸ್ವಸ್ಥನಾಗಿ ಬೀದಿಯಲ್ಲಿ ಅಲೆದಾಡುತ್ತಿದ್ದಂತಹ ಮಂಜುನಾಥ್ ಕುಲಾಲ್‌ರವರು ವಿಶ್ವಾಸದ ಮನೆಯಲ್ಲಿ ಶುಶ್ರೂಷೆ ಮತ್ತು ಆರೈಕೆ ಹೊಂದಿ ಗುಣಮುಖರಾಗಿ ತಮ್ಮ ಕುಟುಂಬಕ್ಕೆ ತೆರಳಿದ್ದಾರೆ.**
- **ಮಾನಸಿಕ ಅಸ್ವಸ್ಥರಾಗಿ ಬೀದಿಯಲ್ಲಿ ಅಲೆದಾಡುತ್ತಿದ್ದ ಹೊನ್ನಾವರದ ಸಹೋ। ಶೋಭಾ ಮತ್ತು ಪುಷ್ಪಾರವರು ವಿಶ್ವಾಸ ಮನೆ ಅನಾಥಾಶ್ರಮದಲ್ಲಿ ಆರೈಕೆ ಹೊಂದಿ ಗುಣಮುಖರಾಗಿ ಮನೆಗೆ ತೆರಳಿದ್ದಾರೆ.**

ಯೆಹೋವನು ದೀನರಿಗೆ ಆಧಾರವಾಗಿದ್ದಾನೆ; ದುಷ್ಟರನ್ನು ನೆಲಕ್ಕೆ ಹತ್ತಿಸಿಬಿಡತ್ತಾನೆ.

(147:6).

# ಕ್ರಿಸ್ತನ ವಿಷಯ ನೀವೇನು ಅನ್ನುತ್ತೀರಿ?

ಫರಿಸಾಯರೇ, ಯೇಸುವನ್ನು ಯಾಕೆ ನಿಂದಿಸುತ್ತೀರಿ?

'ಆತನು ಪಾಪಿಗಳ ಸಂಗಡಲೂ ಸುಂಕದವರ ಸಂಗಡಲೂ ಊಟಮಾಡುತ್ತಾನೆ'

ಕಾಯಫನೇ, ನೀನು ಯೇಸುವಿನ ವಿಷಯವಾಗಿ ಏನು ಹೇಳುತ್ತೀ?

'ಆತನು ದೇವದೂಷಕನು; ಯಾಕಂದರೆ ಮನುಷ್ಯಕುಮಾರನು ಸರ್ವಶಕ್ತನ ಬಲಗಡೆಯಲ್ಲಿ ಆಸೀನನಾಗಿರುವದನ್ನೂ ಆಕಾಶದ ಮೇಘಗಳೊಂದಿಗೆ ಬರುವದನ್ನೂ ನೋಡುವಿರಿ' ಎಂದು ಹೇಳಿದ್ದಾನೆ.

'ಪಿಲಾತನೇ, ನಿನ್ನ ಒಪ್ಪಿಗೆ ಏನು?

"ನಾನು ಈ ಮನುಷ್ಯನಲ್ಲಿ ಯಾವ ಅಪರಾಧವನ್ನೂ ಕಾಣಲಿಲ್ಲ.

'ಯೂದನೇ, ನಿನ್ನ ಗುರುವನ್ನು ಬೆಳ್ಳಿಗೆ ಮಾರಿದನೇ, ಈತನ ವಿರೋಧವಾಗಿ ಏನಾದರೂ ಹೇಳುವುದಕ್ಕೆ ಇದೆಯೋ?'

'ಯಥಾರ್ಥವಾದ ರಕ್ತವನ್ನು ಹಿಡುಕೊಟ್ಟು ಪಾಪಮಾಡಿದೆನು'

ಶತಾಧಿಪತಿಯೇ, ಕ್ರಿಸ್ತನನ್ನೂ ಕ್ರೂಜೆಗೆ ಹಾಕುವಂತೆ ನಡಿಸಿಕೊಂಡು ಹೋದವನೆ, ಯೇಸುವಿಗೆ ವಿರೋಧವಾಗಿ ಏನಾದರೂ ಹೇಳುವಿಯೋ?

'ನಿಜವಾಗಿಯೂ ಈತನು ದೇವಕುಮಾರನಾಗಿದ್ದನು'

ದೆವ್ವಗಳೇ, ನೀವು?

ಆತನು ದೇವಕುಮಾರನು'

'ಸ್ನಾನಿಕನಾದ ಯೋಹಾನನೇ, ನೀನು ಯೇಸುವಿನ ವಿಷಯ ಏನು ಹೇಳುತ್ತೀ?'

ಇಗೋ, ಆತನು ದೇವರ ಕುರಿಮರಿ'

ಅಪೋಸ್ತಲನಾದ ಯೋಹಾನನೇ, ನೀನು?

'ನಾವು ಆತನ ಮಹಿಮೆಯನ್ನು ನೋಡಿದೆವು'

ಪೇತ್ರನೇ, ನಿನ್ನ ಗುರುವಿನ ವಿಷಯ ನೀನು ಏನು ಹೇಳುವಿ?

'ಆತನು ಕ್ರಿಸ್ತನು; ಜೀವಸ್ವರೂಪನಾದ ದೇವಕುಮಾರನು'

ತೋಮನೇ, ನೀನು?

'ನನ್ನ ಕರ್ತನು, ನನ್ನ ದೇವರು'

ಪೌಲನೇ, ಯೇಸುವನ್ನು ಹಿಂಸಿಸಿದಿಯಲ್ಲಾ, ನೀನು ಆತನಿಗೆ ವಿರೋಧವಾಗಿ ಏನು ಹೇಳುತ್ತೀ?

'ಆತನು ನಿಮಿತ್ತ ಎಲ್ಲವನ್ನು ಕಳಕೊಂಡು ಆತನನ್ನು ಅರಿಯವದೇ ಶ್ರೇಷ್ಠ ಭಾಗ್ಯವೆಂದು ತಿಳಿದಿದ್ದೇನೆ'

ಪರಲೋಕದ ದೂತರೇ, ನೀವೇನು ಹೇಳುತ್ತೀರಿ?

ನಿಮಗೋಸ್ಕರ ದಾವೀದನೂರಿನಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ'

ಪರಲೋಕದ ತಂದೆಯೇ, ನೀನು?

'ಈತನು ಪ್ರಿಯನಾಗಿರುವ ನನ್ನ ಮಗನು; ಈತನನ್ನು ನಾನು ಮೆಚ್ಚಿದ್ದೇನೆ'

ರಕ್ಷಣೆ ಹೊಂದಿದ ಕೋಟ್ಯಾನುಕೋಟಿ ವಿಶ್ವಾಸಿಗಳು ಹೇಳುವದೇನು?

'ಆತನು ನಮ್ಮ ದೇವರು, ರಕ್ಷಕನು, ನಾಯಕನು, ಆದರಿಕನು, ಸಹಾಯಕನು, ಮದಲಿಂಗನು, ರಾಜಾಧಿರಾಜನು ಆಗಿದ್ದಾನೆ'

ಇದನ್ನು ಓದುವವರೇ, ನೀವು ಯೇಸು ಕಿಸ್ತನ ಕುರಿತು ಏನು ಹೇಳುತ್ತೀರಿ?

ಅಪ್ಪಾ ಎಲ್ಲಿ?

ಎಂಟು ವರುಷದ ಒಬ್ಬ ಬಾಲಕಿಯು ಕಾಯಿಲೆಯಾಗಿ ಹಾಸಿಗೆಯಲ್ಲಿ ಮಲಗಿದ್ದಳು. ಅವಳ ತಾಯಿ ಭಕ್ತಿವಂತೆಯಾಗಿದ್ದರೂ ತಂದೆ ಮಾತ್ರ ಕುಡಿಕ ಮತ್ತು ಜೂಜುಗಾರ. ಇದರಿಂದಾಗಿ ಅವನು ಕೆಲವು ಸಾರಿ ಮನೆಗೇ ಬರುತ್ತಿದ್ದಿಲ್ಲ. ತಾಯಿ ಮಾತ್ರ ಮಗಳ ಹಾಸಿಗೆಯ ಬಳಿಯಲ್ಲೇ ಇದ್ದು ಆಕೆಯನ್ನು ರಾತ್ರಿ ಹಗಲು ಆರೈಕೆಮಾಡುವವಳಾದಳು. ಆದರೂ ಮಗಳಿಗೆ ಬೇಕಾಗಿದ್ದ ಔಷಧಿಯನ್ನು ಕೊಂಡು ತರಲು ತನಗೆ ಆಗದೆ ಇದ್ದ ದೊಡ್ಡ ನೋವನ್ನು ಸಹಿಸುತ್ತಾ ಮಗಳ ಮುಖದ ಮೇಲೆ ಕೈಯಾಡಿಸಿ 'ಮಗಳೇ, ದೇವರು ನಿನಗೆ ಆರೋಗ್ಯ ಕೊಡಲಮ್ಮಾ' ಎಂದು ಉಕ್ಕಿ ಬರುತ್ತಿದ್ದ ದುಃಖವನ್ನು ಹತ್ತಿಕ್ಕುತ್ತಾ ಹೇಳುತ್ತಿದ್ದಳು. ಆದರೂ ಮಗಳ ಕಾಯಿಲೆ ಪ್ರತಿದಿನ ಜಾಸ್ತಿಯಾಗುತ್ತಿದ್ದದ್ದನ್ನು ತಿಳಿದು ಆಕೆಯು ಒಳಕೋಣೆಯಲ್ಲಿ ಮೊಣಕಾಲೂರಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತಾ ದೇವರಲ್ಲಿ ಮೊರೆಯಿಡುತ್ತಿದ್ದಳು. ಹುಡುಗಿಗೆ ತಂದೆಯ ಮೇಲೆ ಅತಿಶಯವಾದ ಪ್ರೀತಿ! ಇದರಿಂದಾಗಿ ಅವಳು ಅಮ್ಮಾ, ಅಪ್ಪ, ಎಲ್ಲಿ' ಎಂದು ಕೇಳುತ್ತಿದ್ದಳು, ಮಗಳ ಪ್ರಶ್ನೆಯು ತಾಯಿಯ ಹೃದಯವನ್ನು ಭೇದಿಸಿದಂತಾಗಿ ಕೆಲವು ಸಾರಿ ಗೋಳೋ ಎಂದು ಅಳುತ್ತಿದ್ದಳು.

ಒಂದು ದಿನ ಹುಡುಗಿಗೆ ಕಾಯಿಲೆ ತುಂಬಾ ಜಾಸ್ತಿಯಾಗಿ

ನೀನು ಕೈದೆರೆದು ಎಲ್ಲಾ ಜೀವಿಗಳ ಇಷ್ಟವನ್ನು ನೇರವೇರಿಸುತ್ತೀ

(ಕೀರ್ತ. 145:16).

ಸ್ಮೃತಿ ತಪ್ಪಿದಂತಾಯಿತು. ಆಗಾಗ್ಯೆ ಸ್ಮೃತಿ ಬಂದು ಅವಳು "ಅಮ್ಮಾ, ಅಪ್ಪ ಎಲ್ಲಿ'ಎಂದು ಕೇಳುತ್ತಿದ್ದಳು. ಮಗಳು ತನ್ನ ಅಂತ್ಯಗಳಿಗೆಯಲ್ಲಿದ್ದಾಳೆಂದು ತಾಯಿಗೆ ಅರಿವಾಗಿ ಅಶ್ರುಧಾರೆ ಮಾಡುತ್ತಿದ್ದದ್ದೇ ಅವಳನ್ನು ಸಂಕಟದ ಜಲದಲ್ಲಿ ಹಾಕಿದಂತೆ ಇತ್ತು. ಸಾಲದ್ದಕ್ಕೆ ಮಗಳು ಕೇಳುತ್ತಿದ್ದ ಪ್ರಶ್ನೆ! ಅನ್ನ ನೀರನ್ನು ತೊರೆದು ತಾಯಿಯ ಅತೀವ ವ್ಯಥೆಯಿಂದಲೇ ಮಗಳನ್ನು ಆರೈಕೆಮಾಡಿದರೂ ಮಗಳು ತನ್ನ ಮಾತನ್ನೆಲ್ಲಾ ನಿಲ್ಲಿಸಿ ಆಗಾಗ್ಯೆ 'ಅಪ್ಪ ಎಲ್ಲಿ' ಎಂದು ಕೇಳುವದೂ ನಿಂತು ಹೋಗಿ ಮನೆಯಲ್ಲಿ ಮೌನತೆಯು ಆವರಿಸಿತು. ತಾಯಿ ಮೌನವಾಗಿ ಇದ್ದರೂ ಕಣ್ಣೀರು ತಾನೇ ಹರಿಯುತ್ತಿತ್ತು. ಸ್ವಲ್ಪ ಹೊತ್ತಿನಲ್ಲಿ ಆ ಮಗಳಿಗೆ ಸ್ವಲ್ಪ ಪ್ರಜ್ಞೆ ಬಂದಾಗ ಅವಳು, 'ಅಪ್ಪಾ, ಅಪ್ಪಾ, ಅಪ್ಪ ಎಲ್ಲಿ' ಎಂದು ಕಡೇದಾಗಿ ಸಣ್ಣ ಸ್ವರದಲ್ಲಿ ಕೇಳಿ ಕಣ್ಣು ಮುಚ್ಚಿದಳು. ತಾಯಿಯು ಮಗಳ ಹಾಸಿಗೆ ಹಾಗೇ ಇತ್ತು. ಆದರೆ ಮಗಳ ದೇಹ ಅಲ್ಲಿರಲ್ಲ. ಅವಳು ಅದನ್ನು ನೆನಸುತ್ತಾ ಗಟ್ಟಿಯಾಗಿ ಅಳುತಿದ್ದಾಗಲೇ ಎಲ್ಲೊ ಇದ್ದ ಗಂಡ ಮನೆಗೆ ಬಂದಾಗ ಮನೆಯು ಅಳುವ ಸ್ವರದಿಂದ ಪ್ರತಿಧ್ವನಿಸುತ್ತಿತ್ತು. ಅವನು ಒಳಗೆ ಬಂದು ಹೆಂಡತಿಯನ್ನಪ್ಪಿಕೊಂಡು ವಿಷಯವನ್ನು ಕೇಳಿ ತಾನು ತನ್ನ ಹೆಂಡತಿಯೊಂದಿಗೆ ಗೋಳಿಟ್ಟ ಅವಳು ತನ್ನ ಗಂಡನಿಗೆ, ಮಗಳು ಸಾಯುವ ಕಡೇ ಗಳಿಗೆಯವರೆಗೆ "ಅಪ್ಪ ಎಲ್ಲಿ ಎಂದು ಕೇಳಿದ್ದು ಈಗಲೂ ನನ್ನ ತಲೆಯಲ್ಲಿದೆ" ಅಂದಾಗ ಅವನು ತನ್ನ ಮಗಳನ್ನು ತಾನೇ ಬಾಧೆಪಡಿಸಿ ಕೊಂದನೆಂದು ಗ್ರಹಿಸಿ ಮತ್ತಷ್ಟು ಅತ್ತನು. ಆದರೆ ಫಲವೇನು?

ತಂದೆಗಳೇ, ನೀವು ಸನ್ಮಾರ್ಗಿಗಳಾಗಿ ನಿಮ್ಮ ಮುದ್ದು ಮಕ್ಕಳನ್ನು ಪ್ರೀತಿಯಿಂದ ಬೆಳೆಸಬೇಕಾಗಿದ್ದರೆ ಒಂದೇ ಒಂದು ಮಾರ್ಗ. ನೀವು ಯೇಸುಕ್ರಿಸ್ತನನ್ನು ನಿಮ್ಮ ಹೃದಯದಲ್ಲಿ ಸ್ವೀಕರಿಸಿರಿ. ಆಗ ನಿಮ್ಮ ದುಶ್ಚಾಳಿಗಳೆಲ್ಲಾ ಅಳಿದುಹೋಗಿ ಸುಮಾದರಿಯನ್ನು ತೋರಿಸಿ ಹೆಂಡತಿ ಮಕ್ಕಳನ್ನು ಪ್ರೀತಿಯಲ್ಲಿ ಕಾಪಾಡಲು ಸಾಧ್ಯವಾಗುವದು. ಇದನ್ನು ಇಂದೇ ಮಾಡಿರಿ. ತಡಮಾಡಿದರೆ ಕೇಡಾದೀತು.

"ಯಾಕೆಂದರೆ ಆತನು ಅಂಗೀಕಾರದ ಸಮಯದಲ್ಲಿ ನಾನು ನಿನ್ನ ಮನವೆಯನ್ನು ಕೇಳಿದೆನು. ರಕ್ಷಣೆಯ ದಿನದಲ್ಲಿ ನಾನು ನಿನಗೆ ಸಹಾಯ ಮಾಡಿದೆನು ಎಂದು ಹೇಳುತ್ತಾನೆ; ಈಗಲೇ ಆ ಅಂಗೀಕಾರದ ಸಮಯ; ಇಗೋ, ಈಗಲೇ ಆ ರಕ್ಷಣೆಯ ದಿನ" (2ಕೊರಿ.6:2).

ಸಂಗ್ರಹ.

---

## ಜ್ಞಾನಕ್ಕಾಗಿಪ್ರಶ್ನೆಗಳು : ನಮ್ಮ ಪ್ರಶ್ನೆ ನಿಮ್ಮ ಉತ್ತರ

1. **ಔಷಧಿಗಳ ಕರ್ತೃ ಎಂದು ಹೆಸರನ್ನು ಹೊಂದಿರುವ ಸಸ್ಯ ಯಾವುದು?**
2. **ಸೂರ್ಯನಿಂದ ಹೊರಟು ಭೂಮಿಯನ್ನು ತಲುಪಲು ಬೆಳಕು ತೆಗೆದುಕೊಳ್ಳುವ ಸಮಯ ಎಷ್ಟು?**
3. **ಸೂಪರ್ ಕಂಪ್ಯೂಟರ್ ಕಂಡುಹಿಡಿದವರು ಯಾರು?**
4. **ಕಾಗೆಬಂಗಾರ ಎಂದು ಕರೆಯಲ್ಪಡುವ ಖನಿಜ ಯಾವುದು?**
5. **ಸ್ಟೆಫಿ ಗ್ರಾಫಿ ಯಾವ ಆಟಕ್ಕೆ ಸಂಬಂಧಿಸಿದೆ?**
6. **ಕೃತಕ ಮಳೆಗಾಗಿ ಉಪಯೋಗಿಸುವ ರಾಸಾಯನಿಕ ವಸ್ತು ಯಾವುದು?**
7. **ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿಧ್ಯಾಲಯದ ಕೇಂದ್ರ ಕಛೇರಿ ಇರುವ ಸ್ಥಳ ಯಾವುದು?**
8. **ನಮ್ಮ ದೇಶದಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸವನ್ನು ಜಾರಿಗೆ ತಂದವರು ಯಾರು?**
9. **ಗೃಹ ಬಳಕೆಯ ಸರಬರಾಜಾಗುವ ವಿದ್ಯುತ್ತಿನ ವೋಲ್ಟೇಜ್ ಎಷ್ಟು?**
10. **ಶುಂಠಿಯು ಭೂಮಿಯೊಳಗೆ ಬೆಳೆಯುವ ಕಾಂಡ ಇದು ಯಾವ ಕಾಂಡಗಳ ಯಾವ ವರ್ಗಕ್ಕೆ ಸೇರುತ್ತದೆ?**

**ಫೆಬ್ರವರಿ ತಿಂಗಳ ಜ್ಞಾನಕ್ಕಾಗಿ ಪ್ರಶ್ನೆಗಳು ಇದರ ಸರಿ ಉತ್ತರಗಳು:**

1. ವಾಲ್‌ಡರಿಂಗ್ ಆಲ್‌ಬಟ್ರೋಸ್, 2. ಟಂಗ್‌ಸ್ಟನ್, 3. ಅಣುಸ್ಥಾವರ, 4. ಮ್ಯಾಟಿಕನ್ ಸಿಟಿ, 5. ಎಚ್ ಎ ಎಲ್ 6. ಅಕ್ರೆಲಿಡ್ ಅಸಿಡ್, 7. ಕೇರಳ, 8. ಘಾನ, 9. ಕಾರ್ಬನ್ ಡೈ ಆಕ್ಸೆಡ್, 10. ಎಸ್. ನಿಜಲಿಂಗಪ್ಪ.

ನಾನು ಇನ್ನೂ ಕೇವಲ ಪಿಂಡವಾಗಿರುವಾಗ ನಿನ್ನ ಕಣ್ಣುಗಳು ನನ್ನನ್ನು ನೋಡಿದವು (ಕೀರ್ತ.139:16).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 9945710676, 9242649814**

## ಓದುಗರಿಗೆ ವಿಶೇಷ ಸೂಚನೆ :

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

## ಪ್ರಿಯ ವಾಚಕರ ಗಮನಕ್ಕೆ...

"ದೇವರ ಸ್ವರ" ಮಾಸ ಪತ್ರಿಕೆಯು ಅಂದರೆ ಎಪ್ರಿಲ್ 2012ನೇ ಸಂಚಿಕೆಯು ಈಗಾಗಲೇ ನಿಮ್ಮ ಕೈ ಸೇರಿದೆ. ಅದಕ್ಕಾಗಿ ದೇವರಿಗೆ ಸ್ತೋತ್ರ. ನಿಮ್ಮ ಪ್ರಾರ್ಥನೆಯಲ್ಲಿ ಈ ಪತ್ರಿಕೆಗಾಗಿಯೂ ಹಾಗೂ ಇದರ ಮೂಲಕ ನಿಮ್ಮಂತಹ ಸಾವಿರಾರು ಜನರು ಆಶೀರ್ವದಿಸಲ್ಪಡಲು ಪ್ರಾರ್ಥಿಸಿ ಮತ್ತು ಇತರರಿಗೆ ಇದನ್ನು ಪರಿಚಯಿಸಿರಿ. ವಾರ್ಷಿಕ ಚಂದಾ ರೂಪಾಯಿ 120/- ವರ್ಷಕ್ಕೆ.

ಸಂಪಾದಕರು

**ನಮ್ಮ ವಿಳಾಸ :**
**ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,**
**ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115**
**ಕರ್ನಾಟಕ, ಭಾರತ.**
e: Editor_voiceofgod@hotmail.com
Website : www.divinegen.org

ನಮ್ಮ ಕಛೇರಿ ವಿಳಾಸ :
**ಡಿಜಿಎಂ ಬೇತೇಲ್ ಕಛೇರಿ,**
**ವಿಶ್ವಾಸದ ಮನೆ, ಬೇತೇಲ್ ಚರ್ಚ್, ಯೇಸುಪುರ,**
**ಶಂಕರಪುರ ಅಂಚೆ, ಉಡುಪಿ – 574115,**
**ಕರ್ನಾಟಕ, ಭಾರತ.** Ph: (0820) 2589070, 2002781
E-mial: dgmofficial@gmail.com

# ಸ್ಥಳೀಯ ಮತ್ತು ವಿದೇಶ ಸುದ್ಧಿ

- ವಿವಿಧೆಡೆ ಲಘು ಭೂಕಂಪ ಉತ್ತರ ಭಾರತದ ವಿವಿಧೆಡೆ ಲಘು ಭೂಕಂಪ ಸಂಭವಿಸಿತು. ಹರಿಯಾಣ, ರಾಜಸ್ಥಾನ ಮತ್ತು ಉತ್ತರ ಪ್ರದೇಶಗಳ ಜನರಿಗೂ ಭೂಕಂಪ ಅನುಭವಕ್ಕೆ ಬಂದಿದೆ. ಆದರೆ ಯಾವುದೇ ಪ್ರಾಣಹಾನಿಯಾಗಲಿ, ಆಸ್ತಿ ಪಾಸ್ತಿಯ ನಷ್ಟವಾಗಲಿ ಸಂಭವಿಸಿಲ್ಲ ಎಂದು ಅಧಿಕೃತ ಮೂಲಗಳು ತಿಳಿಸಿವೆ.
- ಮಿರಾಜ್ 2000 ಪತನ ಮಿರಾಜ್ ಸಮರ ವಿಮಾನ ರಾಜಸ್ಥಾನದ ಸವಾಯ್ ಮಾಧೋಪುರ ಜಿಲ್ಲೆಯಲ್ಲಿ ಪತನಗೊಂಡಿತು. ಅದರಲ್ಲಿದ್ದ ಇಬ್ಬರು ಪೈಲಟ್‌ಗಳು ಸುರಕ್ಷಿತವಾಗಿ ಹೊರ ಹಾರಿ ಬಚಾವಾದರು. ಇದು ಕಳೆದ 11 ದಿನಗಳಲ್ಲಿ ಮಿರಾಜ್ 2000 ಒಳಗೊಂಡ ಎರಡನೇ ಅವಘಡವಾಗಿದೆ. ಹೀಗಾಗಿ ಪ್ರಾಥಮಿಕ ತಪಾಸಣೆ ಅಂತ್ಯಗೊಳ್ಳುವವರೆಗೆ ಮಿರಾಜ್ 2000 ವಿಮಾನದ ಇಡೀ ದಂಡಿನ ಹಾರಾಟವನ್ನು ನಿಲ್ಲಿಸಲು ಭಾರತೀಯ ವಾಯುಪಡೆ ಆದೇಶ ನೀಡಿದೆ.
- ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ನೀಡುವ ದೈಹಿಕ ದಂಡನೆಯನ್ನು ನಿವಾರಿಸುವ ಸಲುವಾಗಿ ರಾಷ್ಟ್ರೀಯ ಮಕ್ಕಳ ಅಧಿಕಾರಿಗಳ ಸಂರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ಹೊಸ ಮಾರ್ಗಸೂಚಿಯೊಂದನ್ನು ಅನಾವರಣಗೊಳಿಸಿದ್ದು, ದಂಡನೆಯ ಮೇಲೆ ನಿಗಾ ಇಡಲು ವಿಶೇಷ ದಳ ರಚಿಸುವಂತಹ ಸಲಹೆಗಳು ಇದರಲ್ಲಿವೆ.
- ಭಾರತ ಮತ್ತು ಅಮೆರಿಕ ತಮ್ಮ ಜಂಟಿ ಸೇನಾ ತಾಲೀಮನ್ನು ಆರಂಭಿಸಿದವು. ರಾಜಸ್ಥಾನದ ಮರುಭೂಮಿಯಲ್ಲಿ ಈ ತಾಲೀಮು ಎರಡು ವಾರ ನಡೆಯಲಿದೆ. ಭೀತಿವಾದ ವಿರೋಧಿ ಮತ್ತು ನಗರ ಪ್ರದೇಶ ಕಾರ್ಯಾಚರಣೆ ಕುರಿತಂತೆ ಸರಣಿ ಕವಾಯತುಗಳಲ್ಲಿ ಅವುಗಳ ಪಡೆಗಳು ತೊಡಗಿಕೊಳ್ಳಲಿವೆ.
- ವ್ಲಾದಿಮಿರ್ ಪುತಿನ್ ಮೂರನೇ ಸಲ ಅಧ್ಯಕ್ಷರಾಗಿ ಆಯ್ಕೆಯಾಗುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ಅಕ್ರಮಗಳಿಂದ ಕೂಡಿದ್ದ ಅಧ್ಯಕ್ಷೀಯ ಚುನಾವಣೆಯ ಫಲಿತಾಂಶವನ್ನು ವಿಪಕ್ಷಗಳು ಪ್ರಶ್ನಿಸುತ್ತಿರುವಂತೆಯೇ ಪುತಿನ್ ಮೂರನೇ ಅವಧಿಗೆ ಕ್ರೆಮ್ಲಿನ್ ಪ್ರವೇಶಿಸಲು ಸಜ್ಜಾಗಿದ್ದಾರೆ.
- ಬಹುಜನ ಸಮಾಜ ಪಾರ್ಟಿ ಮುಖ್ಯಸ್ಥೆ ಮಾಯಾವತಿ ಮುಖ್ಯಮಂತ್ರಿ ಹುದ್ದೆಯನ್ನು ಕಳೆದುಕೊಂಡಿದ್ದಾರೆ. ಆದರೆ ಅವರು ಐದು ವರ್ಷ ಅವಧಿಯನ್ನು ಪೂರ್ಣಗೊಳಿಸಿದ ಉತ್ತರ ಪ್ರದೇಶದ ಮೊದಲ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.
- ಕಾಂಗೋ ಸ್ಫೋಟ ಸರಣಿ: ಸಾವಿನ ಸಂಖ್ಯೆ 236ಕ್ಕೆ ಕಾಂಗೋದ ಶಸ್ತ್ರಕೋಠಿಯೊಂದರಲ್ಲಿ ಅಗ್ನಿ ಅನಾಹುತದ ಬಳಿಕ ಸಂಭವಿಸಿದ ಸರಣಿ ಸ್ಫೋಟಗಳಲ್ಲಿ ಸತ್ತವರ ಸಂಖ್ಯೆ 236ಕ್ಕೆ ಏರಿದೆ.

  ಗಡಿ ವ್ಯವಸ್ಥೆ : ಭಾರತ ಚೀನ ಮಾತುಕತೆ ಗಡಿ ತಕರಾರುಗಳನ್ನು ಬಗೆಹರಿಸಿಕೊಳ್ಳಲು ಹೊಸದಾಗಿ ರಚಿಸಲಾಗಿರುವ ವ್ಯವಸ್ಥೆಗೆ ಸಂಬಂಧಿಸಿ ಚೀನ ಮತ್ತು ಭಾರತದ ಅಧಿಕಾರಿಗಳು ಇಲ್ಲಿ ಮಹತ್ವದ ಮಾತುಕತೆ ನಡೆಸಿದ್ದು, ಇತ್ತೀಚೆಗೆ ಮಾಡಿಕೊಂಡಿರುವ ಒಪ್ಪಂದಗಳ ಕೆಲವು ನಿಂಬಂಧನೆಗಳನ್ನು ಅನುಷ್ಠಾನಿಸಿಕೊಳ್ಳಲು ಉಭಯ ದೇಶಗಳು ಬದ್ಧವಾಗಿವೆ ಎಂದು ಚೀನ ಘೋಷಿಸಿದೆ.

---

**ಕಳೆದ ಮಾರ್ಚ್ ತಿಂಗಳ ಮಕ್ಕಳ ಸ್ವರ ಸಂಚಿಕೆ ಸರಿಯಾದ ಉತ್ತರಗಳು**

1. ಮೂರನೇ ಪುಸ್ತಕವಾಗಿದೆ.
2. ಮಕ್ಕಳಿರಲಿಲ್ಲ.
3. ಯಾಜಕನಾಗಿದ್ದನು.
4. ಮೂಕನಾಗಿದ್ದನು.
5. ನಜರೇತ್.
6. ಪರಾತ್ಪರನ ಕುಮಾರನೆನೆಸಿಕೊಳ್ಳುವನು.
7. ದಾವೀದನ ಮನೆತನದವನಾಗಿದ್ದನು.
8. ಕುರುಬರಿಗೆ ಕಾಣಿಸಿಕೊಂಡನು.
9. ಸಿಮೆಯೋನನು.
10. ಪ್ರವಾದಿನಿ.
11. ನೀರಿನ ಸ್ನಾನಮಾಡಿಸುವವನಾಗಿದ್ದನು.
12. ಪವಿತ್ರಾತ್ಮನು.
13. ನಲವತ್ತು.
14. ದೆವ್ವ.
15. ಬಲೆಗಳನ್ನು ತೊಳೆಯುತ್ತಿದ್ದರು.
16. ಪೇತ್ರನೆಂಬ ಸೀಮೋನ.
17. ಮನೆಯ ಹೆಂಚು ತೆಗೆದು ಮೇಲಿನಿಂದ ಇಳಿಸಿದರು.
18. ಸುಂಕದವನು.

**ಮಾರ್ಚ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಸರಿ ಉತ್ತರ ಕಳುಹಿಸಿದವರು:**

**ಹರ್ಷಿತ ಶೈನ್ ಯೋಗಿನಿ ಬೇತೆಲ್ ಚರ್ಚ, ಉಡುಪಿ ಸರಸ್ವತಿ ಬೇತೆಲ್ ಚರ್ಚ್, ಉಡುಪಿ.**

ಆತನು ಬಂಡೆಯನ್ನು ಕೆರೆಯನ್ನಾಗಿಯೂ ಶಿಲೆಯನ್ನು ಬುಗ್ಗೆಯನ್ನಾಗಿಯೂ ಮಾರ್ಪಡಿಸುತ್ತಾನೆ

(ಕೀರ್ತ 114:8).




ಒಂದಾನೊಂದು ಕಾಲದಲ್ಲಿ ಒಂದು ದೊಡ್ಡ ಬೆಟ್ಟವು ಹಸಿರು ವಸ್ತ್ರ ಧರಿಸಿಕೊಂಡು ನೋಡುವ ಪ್ರತಿಯೊಬ್ಬರ ಕಣ್ಣು ಸೆಳೆದು ಆಕರ್ಷಿಸಿ ಮನಸೂರೆಗೊಳ್ಳುವಂಥ ಬೆಟ್ಟವು ಆದಾಗಿತ್ತು ಆ ಬೆಟ್ಟದ ಮತ್ತೊಂದು ವಿಶೇಷತೆಯೆನೆಂದರೆ !! .... ಅಲ್ಲಿ ಒಂದು ಪುಟ್ಟ ಗುಡಿಸಲು ಆ ಬೆಟ್ಟದ ತುದಿಯಲ್ಲಿ ಗೋಪುರದ ಕಳಶದಂತೆ ಮೆರೆಯುತ್ತಿತ್ತು. ಆ ಗುಡಿಸಲಲ್ಲಿ ಮುಖ ಸುಕ್ಕುಗೊಂಡ, ಬೆಳ್ಳಿಯಂತೆ ಹೊಳೆಯುವ ಬಿಳಿಗೂದಲ, ನಡುಗುವ ಮಾತುಗಳಿಂದ ಕಥೆ ಹೇಳುವ ಚಾತುರ್ಯವುಳ್ಳ 90 ವರ್ಷದ ಅಜ್ಜಿಯಿದ್ದರು. ಆ ಅಜ್ಜಿಗೆ ನೀತಿ ಕಥೆ ಹೇಳಿ ಪುಟ್ಟ ಪುಟ್ಟ ಮಕ್ಕಳನ್ನ ನಕ್ಕು ನಲಿಸಿ, ಆತ್ಮೀಕ ಜಗತ್ತಿಗೆ ಮಕ್ಕಳನ್ನು ನಡೆಸುವುದೇ ದೈನಂದಿನ ಕೆಲಸವಾಗಿತ್ತು. ಹೀಗೆ ಇರಬೇಕಾದರೆ ಒಂದು ದಿನ ಯೇಸುಪುರ ಅನ್ನೋ ಒಂದು ಊರಿನಲ್ಲಿ ವಾಸವಾಗಿದ್ದ ಎಲ್ಲಾ ಮಕ್ಕಳು ಒಟ್ಟುಗೂಡಿ ಕಥೆ ಕೇಳಲಿಕ್ಕೆ ಬೆಟ್ಟಕ್ಕೆ ಬಂದೇ ಬಿಟ್ರು. ಕಥೆ ಅಂದರೆ ಯಾರಿಗೆ ತಾನೇ ಇಷ್ಟವಾಗಲ್ಲ ಹೇಳಿ. ಅದರಲ್ಲೂ ಯೇಸುಪುರದ ಮಕ್ಕಳಿಗೆ ಪಂಚಪ್ರಾಣ ಪರಲೋಕಕ್ಕೆ ಮೂರೇ ಹೆಜ್ಜೆ ಎನ್ನುವಂತೆ ಕುಣಿದು, ಜಿಗಿದು, ಕುಪ್ಪಲಿಸಿ. ಬೆಳ್ಳಿಗೂದಲಿನ ಅಜ್ಜಿಯನ್ನು ಕಾಡಿ–ಬೇಡಿ ಕಥೆ ಹೇಳುವಂತೆ ಒತ್ತಾಯಿಸಿದರು. ಆ ಅಜ್ಜಿಗೂ ಕಥೆ ಹೇಳುವ ಚಾಲಿ. ಅಜ್ಜಿ ಹೇಳೋ ಕಥೆಯಲ್ಲಿನ ಗಮ್ಮತ್ತೆ ಗಮ್ಮತ್ತು. ಇಷ್ಟೇಲ್ಲಾ ಕೇಳಿದ ಮೇಲೆ ನಾವು ನೀವು ಸುಮ್ಮನಿರೋದಾದರೂ ಹೇಗೆ. ಬನ್ನಿ ಕಥೆಯ ಅಂತರಾಳವ ಕೇಳಿ ಬಂದೇ ಬಿಡುವಾ.

ಸುಮಾರು 2012ಗಳ ವರ್ಷದ ಹಿಂದೆ ಯೇಸು ಎಂಬ ದೇವಕುಮಾರ ಭೂಮಿಗೆ ಬಂದು ಮಾಡಿದ ಅದ್ಭುತಗಳ ಕಥೆಯನ್ನು ಹೇಳಲು ಅಜ್ಜಿ ಪ್ರಾರಂಭಿಸಿದ್ದು ಹೀಗೆ ಬಹಳ ಕಾಲದ ಹಿಂದೆ ಗಲಿಲಾಯ ಎಂಬ ಸೀಮೆ ಇತ್ತು. ಇಲ್ಲಿ ನಜರೇತ್ ಎಂಬ ಬೆಟ್ಟಗಳಿಂದ ಕೂಡಿದ ಪುಟ್ಟ ಹಳ್ಳಿಯು ಇತ್ತು. ಈ ಹಳ್ಳಿಯಲ್ಲಿ ಮರಿಯಳೆಂಬ ಸುಂದರವಾದ ಒಬ್ಬ ಹುಡುಗಿ ಇದ್ದಳು. ಈಕೆ ದೇವರಲ್ಲಿ ಭಯಭಕ್ತಿಯುಳ್ಳವಳು, ವಿಧೇಯಳು ಮತ್ತು ದೀನತೆಯುಳ್ಳವಳು ಆಗಿದ್ದಳು. ಮರಿಯಳಿಗೆ ಅರಸನಾದ ದಾವೀದ ಮನೆತನದ ಯೋಸೇಫನೆಂಬ ಪುರುಷನೊಂದಿಗೆ ವಿವಾಹ ನಿಶ್ಚಯವಾಗಿತ್ತು. ಹೀಗಿರುವಾಗ ದೇವರು ಈಕೆಯ ಭಕ್ತಿಯನ್ನು ಮೆಚ್ಚಿ ಗಬ್ರಿಯೇಲನೆಂಬ ತನ್ನ ದೂತನನ್ನು ಆ ಕನ್ಯೆಯ ಬಳಿಗೆ ಕಳುಹಿಸಿದನು. ಆ ದೂತನು ಪರಲೋಕದಿಂದ ಇಳಿದು ಮರಿಯಳ ಬಳಿಗೆ ಬಂದು ದೇವರ ದಯೆ ಹೊಂದಿದವಳೇ, ನಿನಗೆ ಶುಭವಾಗಲಿ; ಕರ್ತನು ನಿನ್ನ ಸಂಗಡ ಇದ್ದಾನೆ ಅಂದನು. ಮರಿಯಳು ಆ ಮಾತಿಗೆ ಹೆದರಿ ಇದೆಂಥ ಆಶೀರ್ವಾದವೆಂದು ಯೋಚನೆ ಮಾಡುತ್ತಿರಲಾಗಿ ಆ ದೂತನು ಆಕೆಗೆ ಮರಿಯಳೇ, ಹೆದರಬೇಡ; ನಿನಗೆ ದೇವರ ದಯೆ ದೊರಕಿತು. ಇಗೋ, ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ; ಆತನಿಗೆ ಯೇಸುವೆಂದು ಹೆಸರಿಡಬೇಕು. ಆತನು ಮಹಾಪುರುಷನಾಗಿ ಪರಾತ್ಪರನ ಕುಮಾರನೆನಿಸಿಕೊಳ್ಳುವನು; ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು. ಆತನು ಯಾಕೋಬನ ವಂಶವನ್ನು ಸದಾಕಾಲ ಆಳುವನು; ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ ಎಂದು ಹೇಳಿದನು ಮರಿಯಳು ಆಶ್ಚರ್ಯದಿಂದ ದೂತನನ್ನು ಇದು ಹೇಗಾಯಿತು ನಾನು ಪುರುಷನನ್ನು ಅರಿತವಳಲ್ಲ ಎಂದು ಕೇಳಲು ಆತನು ನಿನ್ನ ಮೇಲೆ ಪವಿತ್ರಾತ್ಮ ಬರುವದು ಪವಿತ್ರಾತ್ಮಶಕ್ತಿಯ ನೆರಳು ನಿನ್ನ ಮೇಲೆ ಬೀಳುವದು ಇದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು ಮತ್ತು ಎಲಿಜಬೇತಳು ಸಹ ಮುಪ್ಪಿನವಳಾದರೂ ಆರು ತಿಂಗಳ ಗರ್ಭಿಣಿಯಾಗಿದ್ದಾಳೆ ಅವಳ ಗರ್ಭದಲ್ಲಿ ಗಂಡು ಮಗುವದೆ ಮಕ್ಕಳಿಲ್ಲದೆ ಬಂಜೆಯಾಗಿದ್ದ ಎಲಿಜಬೇತಳು ದೇವರ ಕೃಪೆಯಿಂದ ಗರ್ಭದರಿಸಿದ್ದಾಳೆ. ದೇವರಿಂದ ಬರುವ ಯಾವ ಮಾತಾದರೂ ನಿಷ್ಫಲವಾಗುವದಿಲ್ಲ ಅಂದನು. ಆಗ ಮರಿಯಳು ಈಗೋ, ನಾನು ಕರ್ತನ ದಾಸಿ, ನಿನ್ನ ಮಾತಿನಂತೆ ನನಗಾಗಲಿ ಅಂದಳು (ಲೂಕ. 1:26:38). ಹೀಗೆ ನಮ್ಮ ಪಾಪವನ್ನು ನೀಗಿಸಲಿಕ್ಕಾಗಿ ತಂದೆಯಾದ ದೇವರು ತನ್ನ ಒಬ್ಬನೇ ಮಗನನ್ನು ಪರಿಶುದ್ಧ ಕನ್ನಿಕೆಯಾದ ಮರಿಯಳ ಗರ್ಭದಲ್ಲಿ ಇರಿಸಿದನು. ಈತನೇ ಯೇಸು. ಇದನ್ನು ಕೇಳಿದ ಮಕ್ಕಳು ಅಜ್ಜಿ ಪರಲೋಕದಿಂದ ಬಂದ ಆ ಮನುಷ್ಯ ಯಾರಜ್ಜಿ ಅವನೆಲ್ಲಿ ಹೋದ? ಎಂದು ರೇಚೇಲ್ ಕೇಳಲಾಗಿ ಅಜ್ಜಿಯು ಆತನು ದೇವದೂತ ಅವನು ಈ ಸಂದೇಶವನ್ನು ಮರಿಯಳಿಗೆ ತಿಳಿಸಿ ಪರಲೋಕದಲ್ಲಿರುವ ತಂದೆಯ ಬಳಿಗೆ ಹೊರಟು ಹೋದನು. ಮಕ್ಕಳು ಕುತೂಹಲದಿಂದ ದೇವದೂತನು ಅಂದರೆ ಯಾರಜ್ಜಿ? ಅದಕ್ಕೆ ಅಜ್ಜಿ ಆಂಗ್ಲ ಭಾಷೆಯ ಏಂಜಲ್ ಅಂದರೆ ದೇವದೂತ ಎಂದರ್ಥ ಈ ಪದವು ಗ್ರೀಕ ಭಾಷೆಯ 'ಏಂಜೆಲೋಸ್' ಎಂಬ ಪದದಿಂದ ಬಂದಿದೆ ದೂತ ಎಂಬ ಪದಕ್ಕೆ ಅರ್ಥವನ್ನು ನೋಡುವುದಾದರೆ ಸಂದೇಶ ವಾಹಕ ಅಥವಾ ಓಲೆಕಾರ ಎಂಬುದೇ ಆಗಿದೆ. ಸತ್ಯವೇದದಲ್ಲಿ ನೋಡುವಾಗ ಹೆಚ್ಚಿನ ಸಂದರ್ಭದಲ್ಲಿ ದೇವದೂತರು ದೇವರ ಸಂದೇಶವನ್ನು ತಿಳಿಯಪಡಿಸುತ್ತಿದ್ದರು, ಸಂದೇಶವನ್ನು ತಲುಪಿಸುತ್ತಿದ್ದರೂ ಅಥವಾ ಪ್ರತ್ಯೇಕವಾಗಿ ಆಜ್ಞೆ ಹೇಳುತ್ತಿದ್ದರೂ ಎಂಬುದಾಗಿ (ಆದಿ. 16:7–12, ಅರಣ್ಯ. 22:22–35, ಲೂಕ. 1:11–20,26–38). ಈ ಅಧ್ಯಾಯಗಳಲ್ಲಿ ನೋಡಬಹುದು. ಹೌದಾ ಅಜ್ಜಿ ಅವರು ನೋಡಲು ಹೇಗೆ ಇರುತ್ತಾರೆ? ಅಜ್ಜಿ ಅವರು ಉದ್ದವಾದ ಬಿಳಿ ಅಂಗಿಗಳನ್ನು ಧರಿಸಿ ರೆಕ್ಕೆಗಳವುಳ್ಳವರಾಗಿ ಇರುವುದನ್ನು ಕೆಲವು ಚಿತ್ರದಲ್ಲಿ ನೋಡುತ್ತೇವೆ. ಆದರೆ ಸತ್ಯವೇದದಲ್ಲಿ ಇವರು ಹಲವು ರೂಪದಲ್ಲಿ ಕಾಣಿಸಿಕೊಂಡಿದ್ದಾರೆ. ಮೋಶೆ ಒಬ್ಬ ದೂತನನ್ನು ಮುಳ್ಳಿನ ಪೊದೆಯೊಳಗೆ

ಉರಿಯುವ ಬೆಂಕಿಯಲ್ಲಿ ಕಂಡನು (ವಿಮೋ. 3:2). ದೇವಾಲಯದ ಮಹಾ ಪರಿಶುದ್ಧಸ್ಥಳದಲ್ಲಿ ಆರಾರು ರೆಕ್ಕೆಗಳಿದ್ದ ಸೆರಾಫಿಯರು ಒಂದು ವರ್ಗದ ದೇವದೂತರಾಗಿರಬಹುದು (ಯೆಶಾ. 6:1–7) ಹೀಗೆ ದೂತರಿಗೆ ಯಾವುದೇ ನಿಕರವಾದ ರೂಪವಿರುವುದಿಲ್ಲ ಅವರು ಹಲವಾರು ರೂಪದಲ್ಲಿ ಅನೇಕರ ಕಣ್ಣಿಗೆ ಕಾಣಿಸಿದ್ದನ್ನು ನಾವು ಸತ್ಯವೇದದಲ್ಲಿ ನೋಡಬಹುದಾಗಿದೆ.

ಕಥೆ ಮುಂದುವರಿಯುವದು.......

1. ಅಜ್ಜಿ ಯಾರನ್ನು ಕುರಿತು ಕಥೆ ಹೇಳಿದರು ?
2. ಯೇಸು ಎಷ್ಟು ವರ್ಷಗಳ ಹಿಂದೆ ಈ ಭೂಮಿಗೆ ಬಂದನು?
3. ಮರಿಯಳಿಗೆ ಇದ್ದ ಒಳ್ಳೆಯ ಗುಣಗಳು ಯಾವುದು?
4. ಮರಿಯಳು ಯಾರ ಸಂಬಂಧಿಯಾಗಿದ್ದಳು?
5. ಯೋಸೇಫನು ಯಾರ ಮನೆತನದವನು?
6. ದೇವರು ಕಳುಹಿಸಿದ ದೂತನ ಹೆಸರು ಏನು?
7. ದೂತರು ಅಂದರೆ ಯಾರು?
8. ದೂತರನ್ನು ಚಿತ್ರದಲ್ಲಿ ನಾವು ಹೇಗೆ ನೋಡಬಹುದು?

– ಸಹೋ॥ ಕುಸುಮ
ಬೇತೇಲ್ ಚರ್ಚ್, ಕೋರಮಂಗಲ.

**ವಿಶೇಷ ಸೂಚನೆ : ಪ್ರತಿ ತಿಂಗಳ 15ನೇ ತಾರೀಕಿನ ಒಳಗೆ ನಮ್ಮ ಕೈಗೆ ನಿಮ್ಮ ಉತ್ತರಗಳು ತಲುಪತಕ್ಕದ್ದು.**

## ಬೈಬಲ್ ಕ್ವಿಜ್

1. ದೇವರ ಮನೆಯಲ್ಲೆಲ್ಲಾ ನಂಬಿಗಸ್ಥನು ಎಂದು ಹೆಸರು ಪಡೆದ ವ್ಯಕ್ತಿ ಯಾರು?
2. ದೇವರ ಸ್ನೇಹಿತ ನೆಂದು ಹೆಸರು ಪಡೆದ ಏಕೈಕ ವ್ಯಕ್ತಿ ಯಾರು?
3. ತಾಯಿ ಅಥವಾ ಸ್ತ್ರೀಯರಿಗೆಂದು ಬರೆದಂಥ ಏಕೈಕ ಪತ್ರಿಕೆ ಯಾವುದು?
4. ಹೊಟ್ಟೆ ತುಂಬಿದ ಸೋಮಾರಿ ಯಾರು?
5. ಆದಾಮನು ತನ್ನ ಹೆಂಡತಿಗೆ ಏನೆಂದು ಹೆಸರಿಟ್ಟನು?
6. ಜೂಬಿಲಿ ಸಂವತ್ಸರ ಅಂದರೆ ಏನು?
7. ಇವನು ನನಗೆ ಒಪ್ಪುವ ಮನುಷ್ಯನು ಅವನು ನನ್ನ ಇಷ್ಟವನ್ನೆಲ್ಲಾ ನೆರವೇರಿಸುವನು ಎಂದು ಯಾರನ್ನು ಕುರಿತು ದೇವರು ಸಾಕ್ಷಿಕೊಟ್ಟರು?
8. ಸೊಲೊಮೋನನು ಅರಮನೆಯನ್ನು ಎಷ್ಟು ವರ್ಷಗಳಲ್ಲಿ ಕಟ್ಟಿಸಿ ತೀರಿಸಿದನು?
9. ಈ ದಿನದಲ್ಲಿ ನಾನು ನಿನ್ನನ್ನು ತೆಗೆದುಕೊಂಡು ಮುದ್ರೆಯುಂಗುರವಾಗಿ ಮಾಡಿಕೊಳ್ಳುವೆನು. ಎಂದು ದೇವರು ಯಾರನ್ನು ಕುರಿತು ಹೇಳಿದನು?
10. ಮರಿಯಳು ಯಾವ ಉತ್ತಮ ಭಾಗವನ್ನು ಆರಿಸಿಕೊಂಡಳು ಅಥವಾ ಆಕೆಯಿಂದ ತೆಗೆಯಲ್ಪಡದ ಉತ್ತಮ ಭಾಗ ಯಾವುದು ?
11. ಇಗೋ, ಇವನು ನಿಜವಾದ ಇಸ್ರಾಯೇಲನು; ಇವನಲ್ಲಿ ಕಪಟವಿಲ್ಲ ಎಂಬುವುದಾಗಿ ಯೇಸುಸ್ವಾಮಿ ಯಾರನ್ನು ಕುರಿತು ಹೇಳಿದನು?
12. ರುಚಿಯಿಲ್ಲದ ಸಪ್ಪೆಯಾದ ಆಹಾರ ಪದಾರ್ಥ ಯಾವುದು?
13. ಕುರುಡರಿಗೆ ದಾರಿ ತೋರಿಸುವ ಕುರುಡರು ಯಾರು?
14. ತಾನು ಹೊದ್ದುಕೊಂಡಿದ್ದ ಹೊಸ ಬಟ್ಟೆಯನ್ನು ಹರಿದು ಹನ್ನೆರಡು ತುಂಡು ಮಾಡಿದವನು ಯಾರು?
15. ನಿನ್ನಿಂದ ಲಕ್ಷಾಂತರ ಸಂತಾನವಾಗಲಿ ಅಥವಾ ನೀನು ಕೋಟಿ ಕೋಟಿಯಾಗಿ ಆಶೀರ್ವಾದ ಹೊಂದಿ ಅಭಿವೃದ್ಧಿಯಾಗುವಿ ಎಂದು ಶುಭ ಹೊಂದಿದವಳು ಯಾರು?
16. ಸುವಾರ್ತೆಯು ಎಂಥವರಿಗೆ ಮರೆಯಾಗಿದೆ?
17. ಉಳಿ ಮುಂತಾದವುಗಳನ್ನು ಉಪಯೋಗಿಸದೆ ಅಥವಾ ಕಬ್ಬಿಣದ ಯಾವುದೇ ಸಲಕರಣೆಗಳನ್ನು ಉಪಯೋಗಿಸದೆ ಹುಟ್ಟುಕಲ್ಲುಗಳಿಂದಲೇ ಯಜ್ಞವೇದಿಯನ್ನು ಕಟ್ಟಿಸಿದ ಏಕೈಕ ವ್ಯಕ್ತಿ ಯಾರು?
18. ಫಿಲಿಷ್ಟಿಯರು ಸೌಲನನ್ನು ಎಲ್ಲಿ ಹತಮಾಡಿದರು? ಅಥವಾ ಸೌಲನು ಎಲ್ಲಿ ಮರಣಹೊಂದಿದನು?
19. ಗಿದ್ಯೋನನ ಮತ್ತೊಂದು ಹೆಸರು ಯಾವುದು?
20. ಲೇವಿಯ ಮಕ್ಕಳು ಯಾರು?

ಯೆಹೋವನು ನಮ್ಮನ್ನು ನೆನಪುಮಾಡಿಕೊಂಡಿದ್ದಾನೆ; ಸಣ್ಣವರು ಮೊದಲುಗೊಂಡು ದೊಡ್ಡವರ ಪರ್ಯಂತರ ಎಲ್ಲರನ್ನೂ ಆಶೀರ್ವದಿಸುವನು (ಕೀರ್ತ. 115:12).

# ರೂತಳ ಪುಸ್ತಕ

ಕರ್ತನಾದ ಯೇಸುಕ್ರಿಸ್ತನ ಮಧುರ ನಾಮದಲ್ಲಿ ಈ ಪತ್ರಿಕೆಯನ್ನು ಓದುತ್ತಿರುವಂತಹ ಕ್ರಿಸ್ತನಲ್ಲಿ ಪ್ರಿಯ ಸಹೋದರ/ಸಹೋದರಿಯರಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳು. ನಾನು ಮಹಿಳೆಯರ ಸ್ವರದಲ್ಲಿರುವ ಸಂತೋಷವುಳ್ಳ ಕುಟುಂಬ ಎಂಬ ನನ್ನ ಲೇಖನವನ್ನು ಮುಗಿಸಿದ ನಂತರ ಅನೇಕ ಸಹೋದರ/ಸಹೋದರಿಯರು ಫೋನ್ ಕರೆ ಮೂಲಕ ಹಾಗೂ ಪತ್ರಗಳ ಮೂಲಕವಾಗಿಯೂ ನೀವು ಸಂತೋಷವುಳ್ಳ ಕುಟುಂಬವನ್ನು ಮುಗಿಸಬಾರದಾಗಿತ್ತು ಅದರಿಂದ ನಮಗೂ ನಮ್ಮ ಕುಟುಂಬಕ್ಕೂ ಅನೇಕ ಆತ್ಮೀಕ ಪ್ರಯೋಜ ಹಾಗೂ ಆಶೀರ್ವಾದ ಉಂಟಾಗಿದೆ ಎಂಬುದಾಗಿ ಹೇಳಿದರು, ಅದನ್ನೇ ಮುಂದುವರಿಸಿರಿ ಎಂಬುದಾಗಿಯೂ ಆಲೋಚನೆ ಹೇಳಿದರು. ತುಂಬಾ ಪ್ರಾರ್ಥನೆಯ ನಂತರ ದೇವರಾತ್ಮನು ನನಗೆ ರೂತಳ ಪುಸ್ತಕವನ್ನು ಬರೆಯಲು ಪ್ರೇರೇಪಿಸಿದನು. ಇದು ಕೂಡಾ ಪರಿಶುದ್ಧಾತ್ಮನ ಪ್ರೇರಣೆ ಹಾಗೂ ದೇವರ ಚಿತ್ತದ ಪ್ರಕಾರ ಬರೆಯುವುದರಿಂದ ಇದರಿಂದ ಅನೇಕರು ಆತ್ಮೀಕ ಪ್ರಯೋಜವನ್ನು ಪಡೆಯುವರು ಎಂದು ನಾನು ನಂಬುತ್ತೇನೆ. ನೀವೆಲ್ಲರೂ ನನಗೋಸ್ಕರ, ನನ್ನ ಕುಟುಂಬಕೋಸ್ಕರ ಹಾಗೂ ನಮ್ಮ ಸೇವೆಗೋಸ್ಕರ ಅನುದಿನವೂ ಪ್ರಾರ್ಥಿಸಿರಿ.

ಈ ಪುಸ್ತಕದಲ್ಲಿ 4 ಅಧ್ಯಾಯಗಳು, 85 ವಚನಗಳು ಇವೆ. ಸತ್ಯವೇದದಲ್ಲಿ ಇದು 8ನೆಯ ಪುಸ್ತಕವಾಗಿದೆ. ಹೊಸ ಒಡಂಬಡಿಕೆಯಲ್ಲಿ 2 ಕೊರಿಂಥ 8ನೆಯ ಪುಸ್ತಕವಾಗಿದೆ. ರೂತಳ ಪುಸ್ತಕಕ್ಕೂ 2 ಕೊರಿಂಥಕ್ಕೂ ಇರುವ ವ್ಯತ್ಯಾಸವನ್ನು ನಾವು ನೋಡೋಣ.

**ರೂತಳು**

1. ನಿರೀಕ್ಷೆ ಕಳಕೊಂಡವರಿಗೆ ನಿರೀಕ್ಷೆಯನ್ನುಂಟು ಮಾಡುವ ಪುಸ್ತಕವಾಗಿದೆ.
2. ನಂಬಿಕೆಯಲ್ಲಿ ಬಿದ್ದು ಹೋದವರಿಗೆ ಪುನರ್‌ಸ್ಥಾಪನೆಯನ್ನು ಉಂಟುಮಾಡುವ ಪುಸ್ತಕವಾಗಿದೆ.
3. ಪ್ರತಿಯೊಬ್ಬರ ಜೀವಿತದಲ್ಲೂ ಹೊಸ ಆರಂಭ ಇದೆ ಎಂದು ನಿರೂಪಿಸುವ ಪುಸ್ತಕವಾಗಿದೆ.
4. ವಿವಿಧ ಸಮಸ್ಯೆಗಳಲ್ಲಿ ಬಂಧಿಸಲ್ಪಟ್ಟವರಿಗೆ ಬಿಡುಗಡೆ ಇದೆ ಎಂದು ತಿಳಿಸುವ ಪುಸ್ತಕವಾಗಿದೆ.
5. ಯಾವುದೇ ಕಾರಣಕ್ಕೂ ಒಂದು ಸಲ ದೇವರ ಅನ್ಯೋನ್ಯತೆ ಕಳಕೊಂಡವರು ತಿರುಗಿ ಅನ್ಯೋನ್ಯತೆ ಹೊಂದಲು ಅವಕಾಶ ಇದೆ ಎಂದು ತಿಳಿಸುವ ಪುಸ್ತಕವಾಗಿದೆ.
6. ದೇವರ ಬಳಿ ತಿರುಗಿ ಬರುವುದಾದರೆ ಶೂನ್ಯ ಅವಸ್ಥೆಯಿಂದ ದೇವರು ಆಶೀರ್ವದಿಸಿ ಅನೇಕರಿಗೆ ಆಶೀರ್ವಾದ ಪಾತ್ರೆಯಾಗಿ ದೇವರು ಮಾರ್ಪಡಿಸ ಬಲ್ಲನು ಎಂದು ತಿಳಿಸುವ ಪುಸ್ತಕವಾಗಿದೆ.
7. ದೇವರ ಚಿತ್ತಕ್ಕನುಸಾರವಾಗಿ ಒಪ್ಪಿಸಿಕೊಟ್ಟರೆ ಕರ್ತನು ಸರಿಯಾದ ಮಾರ್ಗದರ್ಶನ ಮಾಡಿ ಆತನಿಗೆ ಒಪ್ಪುವ ಮಾರ್ಗದಲ್ಲಿ ನಡೆಸುವನು ಎಂದು ತಿಳಿಸುವ ಪುಸ್ತಕವಾಗಿದೆ.

**2 ಕೊರಿಂಥ:**

1. ದೇವರಾತ್ಮ ಸಂಬಂಧವಾದ ಸೇವೆಯ ಬಗ್ಗೆ ತಿಳಿಸುವ ಪುಸ್ತಕವಾಗಿದೆ.
2. ಹಳೆ ಒಡಂಬಡಿಕೆಯ ಸೇವೆ ಮರಣ ವಿಧಿಸುವ ಸೇವೆ, ಹೊಸ ಒಡಂಬಡಿಕೆಯ ಸೇವೆ ಪ್ರಭಾವವುಳ್ಳ ಸೇವೆ ಎಂದು ತಿಳಿಸುವ ಪುಸ್ತಕವಾಗಿದೆ.
3. ಹಳೆ ಒಡಂಬಡಿಕೆಯ ಸೇವೆಯು ಅಪರಾಧ ನಿರ್ಣಯಕ್ಕೆ ಸಾಧನವಾಗಿರುವ ಸೇವೆಯಾಗಿದೆ. ಹೊಸ ಒಡಂಬಡಿಕೆಯ ಸೇವೆಯು ನೀತಿಗೆ ಸಾಧನವಾಗಿರುವ ಸೇವೆಯಾಗಿದೆ ಎಂದು ತಿಳಿಸುವ ಪುಸ್ತಕವಾಗಿದೆ.
4. ಬಿಡುಗಡೆ ಮಾಡುವಂಥ ಸೇವೆಯಾಗಿದೆ ಎಂದು ತಿಳಿಸುವ ಪುಸ್ತಕವಾಗಿದೆ.
5. ಕರ್ತನಾದ ಯೇಸುಕ್ರಿಸ್ತನ ಸ್ವಾರೂಪ್ಯಕ್ಕೆ ನಡೆಸಲ್ಪಡುತ್ತೇವೆ ಎಂದು ತಿಳಿಸುವ ಪುಸ್ತಕವಾಗಿದೆ.
6. ಕ್ರಿಸ್ತನಲ್ಲಿ ಹೊಸ ಸೃಷ್ಟಿ ಎಂದು ತಿಳಿಸುವ ಪುಸ್ತಕವಾಗಿದೆ.
7. ಕ್ರಿಸ್ತನಲ್ಲಿ ಎಲ್ಲಾ ವಾಗ್ದಾನಗಳು ನೆರವೇರುತ್ತವೆ ಎಂದು ತಿಳಿಸುವ ಪುಸ್ತಕವಾಗಿದೆ.

ಪುಸ್ತಕದ ಬರಹಗಾರನು ಪ್ರವಾದಿಂಯಾದ ಸಮುವೇಲನಾಗಿದ್ದಾನೆ. ನ್ಯಾಯಸ್ಥಾಪಕರು ಇಸ್ರಾಯೇಲರನ್ನು ಆಳುವಂತಹ ಸಂದರ್ಭದಲ್ಲಿ ಈ ಪುಸ್ತಕದಲ್ಲಿರುವ ಚರಿತ್ರೆಯು ಜನ್ಮವೆತ್ತಿತು.

ಕರ್ತನು ಚೀಯೋನಿನಿಂದ ಹೇರಳವಾಗಿ ಆಶೀರ್ವಾದಿಸಲಿ.

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು
ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ**

ಯೆಹೋವನು ಮೇಲಣ ಲೋಕದಲ್ಲ ತನ್ನ ಸಿಂಹಾಸನವನ್ನು ಸ್ಥಾಪಿಸಿದ್ದಾನೆ; ಆತನು ಸಮಸ್ತವನ್ನೂ ಆಳುತ್ತಾನೆ (ಕೀರ್ತ. 103:19).

# ನಿಮಗಾಗಿ ಚಿಂತಿಸುವ ದೇವರು

ಕ್ರಿಸ್ತನಲ್ಲಿ ಪ್ರೀತಿಯುಳ್ಳ ಸಹೋದರ/ರಿ ನಮ್ಮ ಜೀವಿತದಲ್ಲಿ ನಾವು ಎದುರಿಸಬೇಕಾದ ಕಷ್ಟಗಳ ಬಗ್ಗೆ, ಸಮಸ್ಯೆಗಳ ಬಗ್ಗೆ, ಯಾವಾಗಲೂ ಚಿಂತಿಸುತ್ತಿರುತ್ತೇವೆ. ಆದರೆ ದೇವರ ವಾಕ್ಯ ನಮಗೆ ತಿಳಿಸುವುದೇನೆಂದರೆ ನಮ್ಮ ಚಿಂತೆಗಳನ್ನು ಆತನ ಮೇಲೆ ಹಾಕಿ ನಾವು ನಿಶ್ಚಿಂತೆಯಿಂದ ಇರಬೇಕು ಎಂದು. ಆದರೆ ನಾವು ನಮ್ಮ ಭಾರವನ್ನು ನಾವೇ ಹೊರುವುದರಿಂದ ಕರ್ತನು ನಮಗಾಗಿ ಏನು ಮಾಡಲು ಸಾದ್ಯವಾಗದೆ ಇರುವಂತದ್ದಾಗಿದೆ. ಒಬ್ಬ ರೋಗಿ ತನ್ನ ಅನಾರೋಗ್ಯದ ಕುರಿತು ವೈದ್ಯರ ಬಳಿ ಹೇಳಿಕೊಂಡಾಗ ಮಾತ್ರ ವೈದ್ಯನಾದವನು, ಆ ಅನಾರೋಗ್ಯಕ್ಕೆ ಮದ್ದನ್ನು ಕೊಡಲು ಸಾಧ್ಯ. ಅದೇ ರೀತಿಯಾಗಿ ನಾವು ನಮ್ಮ ಭಾರವನ್ನು ಕರ್ತನ ಮೇಲೆ ಹಾಕಿದರೆ ಮಾತ್ರ ಆತನು ನಮಗೋಸ್ಕರ ಚಿಂತಿಸಲು ಸಾಧ್ಯ, **"ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ, ಆತನು ನಿಮಗೋಸ್ಕರ ಚಿಂತಿಸುತ್ತಾನೆ"** (1 ಪೇತ್ರ. 5:2).

ಒಂದು ಸಣ್ಣ ಕಥೆಯನ್ನು ನಿಮ್ಮ ಮುಂದೆ ಹೇಳಲು ಬಯಸುತ್ತೇನೆ, ಒಂದು ಕುಟುಂಬದಲ್ಲಿ ಯಜಮಾನ ಮಧ್ಯರಾತ್ರಿಯ ತನಕ ಮಲಗದೆ ಚಿಂತಿಸುತ್ತಿರುತ್ತಾನೆ. ಇದನ್ನು ನೋಡಿದ ಹೆಂಡತಿಯು ಗಂಡನ ಬಳಿ ಮಲಗದೆ ಚಿಂತಿಸುತ್ತಿರುವುದ್ದಕ್ಕೆ ಕಾರಣ ಕೇಳುತ್ತಾಳೆ. ಅದಕ್ಕೆ ಗಂಡನು ತಾನು ತನ್ನ ನೆರೆಮನೆಯವನ ಹತ್ತಿರ 30ಸಾವಿರ ಸಾಲ ತೆಗೆದುಕೊಂಡಿದ್ದು, ಅದನ್ನು ನಾಳೆಯ ದಿನದಲ್ಲಿ ಹಿಂತಿರುಗಿಸುವೆನೆಂದು ಮಾತು ಕೊಟ್ಟಿರುವುದಾಗಿ ಹೇಳುತ್ತಾನೆ. ಮಾತ್ರವಲ್ಲ ಅದನ್ನು ಹಿಂತಿರುಗಿಸಲು ತನ್ನ ಬಳಿ ಏನು ಇಲ್ಲಾ ಎಂಬುದಾಗಿ ತಿಳಿಸುತ್ತಾನೆ. ಇದನ್ನು ಕೇಳಿದ ಹೆಂಡತಿಯು ಗಂಡನಿಗೆ ಧೈರ್ಯವನ್ನು ಹೇಳಿ, ಆ ರಾತ್ರಿಯಲ್ಲಿ ಸಾಲ ಕೊಟ್ಟವನ ಮನೆಯ ಬಾಗಿಲವನ್ನು ತಟ್ಟುತ್ತಾಳೆ. ಬಾಗಿಲನ್ನು ತೆಗೆದ ವ್ಯಕ್ತಿ ಆ ಹೊತ್ತಿನಲ್ಲಿ ಬಂದ ಕಾರಣವನ್ನು ಕೇಳುತ್ತಾನೆ. ಅದಕ್ಕೆ ಆಕೆಯು ನನ್ನ ಗಂಡ ನಿಮಗೆ ಕೊಡಲಿಕ್ಕಿರುವ ಸಾಲವನ್ನು ನಾಳೆ ಕೊಡುತ್ತೇನೆಂದು ಹೇಳಿದ್ದನಾದರೂ, ಆತನ ಬಳಿ ನಿಮ್ಮ ಸಾಲವನ್ನು ತೀರಿಸಲು ಆಗದೆ ಇರುವುದಾಗಿ ತಿಳಿಸುತ್ತಾಳೆ ಮತ್ತು ಏನು ಬೇಕಾದರೂ ಮಾಡುಕೊಳ್ಳಿ ಎಂದು ಹೇಳಿ ತನ್ನ ಮನೆಗೆ ಹೋಗಿ ನಿಶ್ಚಿಂತೆಯಿಂದ ಮಲಗುತ್ತಾಳೆ. ಈಗ ಸಾಲಕೊಟ್ಟವನು ಯೋಚಿಸಬೇಕು ಸಾಲವನ್ನು ಹಿಂತೆಗೆದುಕೊಳ್ಳುವುದರ ಕುರಿತು ಮತ್ತು ಆತನಿಗೆ ಏನು ಮಾಡಬೇಕು ಎಂದು ಇದೊಂದು ಉದಾಹರಣೆಯಾದರೂ ಪ್ರಿಯರೇ ಇದು ತಿಳಿಸುವ ಸಂಗತಿ ನಮ್ಮಿಂದ ಏನು ಮಾಡಲು ಸಾಧ್ಯವಾಗದೇ ಇರುವಾಗ ನಾವು ದೇವರ ಕೈಯಲ್ಲಿ ಎಲ್ಲವನ್ನು ಒಪ್ಪಿಸಿ ಸಮಾಧಾನದಿಂದ ಇರಬೇಕು ಎಂದು.

ದೇವರ ವಾಕ್ಯ ನಮಗೆ ತಿಳಿಸುವುದೇನೆಂದರೆ ಮತ್ತಾ. 6:27. ಚಿಂತೆಮಾಡಿ ಒಂದು ಮೊಳ ಉದ್ದ ಬೆಳೆಯಲು ನಿಮ್ಮಲ್ಲಿ ಯಾರಿಂದಾದಿತು? ಎಂದು ಅದೇ ರೀತಿ ಅಸಾಧ್ಯ ಸಂಗತಿಗಳ ಕುರಿತಾಗಿ ಯೋಚಿಸದೇ ಕರ್ತನಾದ ಯೇಸುಕ್ರಿಸ್ತನ ಕೈಯಲ್ಲಿ ಎಲ್ಲಾವನ್ನು ಒಪ್ಪಿಸಿ ಆತನು ನಮಗಾಗಿ ಮಾಡುವ ಕಾರ್ಯಗಳಿಗಾಗಿ ಎದುರುನೋಡುತ್ತಾ ಇರಬೇಕು. ನಮ್ಮ ಅನುದಿನದ ಭಾರವನ್ನು ಹೊರುವ ನಮ್ಮ ದೇವರು ಎಲ್ಲಾ ಸಮಯಗಳಲ್ಲೂ ನಮ್ಮ ಸಂಗಡವೇ ಇದ್ದು ನಮಗೆ ಧೈರ್ಯ ಕೊಡುತ್ತಾರೆ. ಇದನ್ನು ಅರಿಯದೇ ನಾವು ವ್ಯರ್ಥವಾಗಿ ಚಿಂತಿಸಿ ನಮ್ಮ ಅಮೂಲ್ಯ ಸಮಯವನ್ನು ಹಾಳು ಮಾಡಿಕೊಳ್ಳುತ್ತೇವೆ. ಆದಕಾರಣ ಯಾವ ವಿಷಯದಲ್ಲಿಯೂ ಚಿಂತಿಸದೇ ಎಲ್ಲಾ ಸಮಯದಲ್ಲೂ ದೇವರು ನಮಗಾಗಿ ಮಾಡಿದ ಕಾರ್ಯಗಳಿಗಾಗಿ ಆತನನ್ನು ಸ್ತುತಿಸುತ್ತಾ. ನಮ್ಮ ಚಿಂತೆಯನ್ನು ಆತನಲ್ಲಿ ಹಾಕಿ ನಾವು ನಿಶ್ಚಿಂತೆಯಿಂದ ಪರಿಶುದ್ಧತೆಯಲ್ಲಿ ಜೀವಿಸೋಣ. ಕರ್ತನಾದ ಯೇಸುಕ್ರಿಸ್ತನು ನಿಮ್ಮನ್ನು ಹೇರಳವಾಗಿ ಆಶೀರ್ವದಿಸಲಿ. ಅತೀ ಶೀಘ್ರದಲ್ಲಿ ಬರುವ ಕ್ರಿಸ್ತಯೇಸುವಿನಲ್ಲಿ ನಿಮ್ಮೆಲ್ಲರಿಗೂ ನನ್ನ ವಂದನೆಗಳು.

**– ಕ್ರಿಸ್ತನ ಪ್ರೀತಿಯಲ್ಲಿ ನಿಮ್ಮ**

ಭೂಮ್ಯಾಕಾಶಗಳನ್ನು ಉಂಟುಮಾಡಿದ ಯೆಹೋವನ ನಾಮದಲ್ಲಿ ನಮಗೆ ರಕ್ಷಣೆಯಾಗುವದು (ಕೀರ್ತ. 124:8).